₹ 5/-

# ನೇಸರು

## ತಿಂಗಳೋಲೆ

PAGES 20

APRIL 2023 | Nesaru Tingalole | Vol. XLI - 04



## ಚೈತ್ರ ವಸಂತ ನಮ್ಮಲ್ಲಿಗೆ ಬಂದಿದ್ದಾನೆ

ಮೈಸೂರು ಅಸೋಸಿಯೇಷ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065


Email : mysoreassociation.mumbai@gmail.com

## ಅಸೋಸಿಯೇಷನ್ನಿನಲ್ಲಿ 30.03.2023ರಂದು ನಡೆದ ರಾಮ ನವಮಿ ಪೂಜೆ





## ಅಸೋಸಿಯೇಷನ್ನಿನಲ್ಲಿ ಮುಂಬರುವ ಕಾರ್ಯಕ್ರಮಗಳು



ಏಪ್ರಿಲ್ 22, 2023 ಸಂಜೆ 5.30

**ಅಕ್ಷಯ ತೃತೀಯಾ**

ವಿಶೇಷ ಪೂಜೆ

**ನಾದ ತರಂಗ** ಪ್ರಸ್ತುತ ಪಡಿಸುವ

29.04.2023 ಸಂಜೆ 6.30ಕ್ಕೆ

# ಕೊಳಲು ವಾದನ

ಕು. ಅದಿತಿ ಐಯ್ಯರ್ ಮತ್ತು ತಂಡದವರಿಂದ

ಹಾಗೂ

# ಕರ್ನಾಟಕ ಶಾಸ್ತ್ರೀಯ ಸಂಗೀತ

ಶ್ರೀಮತಿ ಲಕ್ಷ್ಮೀ ರಾಜಶೇಖರ್ ಮತ್ತು ತಂಡದವರಿಂದ

ಸ್ಥಳ:

ಅಸೋಸಿಯೇಷನ್ ಕಿರು ಸಭಾಗೃಹ 393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬೈ – 400 019

ನೇಸರು ತಿಂಗಳೋಲೆ

ಸಂಪುಟ 41 ಎಪ್ರಿಲ್–2023 ಸಂಚಿಕೆ 04

# ಆಧುನಿಕತೆಯಲ್ಲಿ ಮಾಯವಾಯ್ತೇ ಮಾನವೀಯತೆ



**✍ ಡಾ. ಜ್ಯೋತಿ ಸತೀಶ್**

"ಏನಾದರೂ ಆಗು, ಮೊದಲು ಮಾನವನಾಗು.."

ಕುವೆಂಪುರವರು ಹಾಡಿ ಕೊಂಡಾಡಿದ ನಾಡಿದು. ಬದುಕು ಎಂಬುದು ನಮಗೆಲ್ಲರಿಗೂ ದೊರೆತ ಬೆಲೆ ಕಟ್ಟಲಾಗದ ಒಂದು ಅಮೂಲ್ಯ ಕಾಣಿಕೆ ಎಂದೇ ಹೇಳಬಹುದು. ತಾಳ್ಮೆ, ಪರೋಪಕಾರ, ಸಹಬಾಳ್ವೆ, ದಯೆ, ಕರುಣೆ ಹೀಗೆ ಮುಂತಾದ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದರ ಮೂಲಕ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು. ಇಂದು ಮನುಷ್ಯ ಮನುಷ್ಯರ ನಡುವೆ ಸೇತುವೆಯಾಗಬೇಕಿದ್ದ ಧರ್ಮ ಅವರ ನಡುವಿನ ಬಹುದೊಡ್ಡ ತಡೆಗೋಡೆಯಾಗಿ ನಿಂತಿರುವುದು ವಿಪರ್ಯಾಸವೇ ಸರಿ. ಯಾವುದೇ ಧರ್ಮವು ಹಿಂಸೆ, ಅಸೂಯೆ, ಜಗಳ ಮುಂತಾದ ಋಣಾತ್ಮಕ ಅಂಶಗಳನ್ನು ಪ್ರತಿಪಾದಿಸುತ್ತಿಲ್ಲ. ನಮಗೆ ಇಂದು ಬೇಕಾಗಿರೋದು ಮನುಷ್ಯ ಧರ್ಮ. ಮನುಷ್ಯ–ಮನುಷ್ಯರ ನಡುವಿನ ಸಾಮಾಜಿಕ ಸಂಬಂಧಗಳಲ್ಲಿ ಬಿರುಕು ಮೂಡಿಸುವ ಈ ಧರ್ಮಗಳಿಗಿಂತ ಮಾನವೀಯತೆಯನ್ನೇ ತಳಹದಿಯನ್ನಾಗಿ ಪಡೆದಿರುವ ಮನುಷ್ಯ ಧರ್ಮವೇ ಶ್ರೇಷ್ಠವಾದುದು.

ಮನುಷ್ಯರಲ್ಲಿ ಮಾನವೀಯತೆ ಬಹಳ ಮುಖ್ಯವಾಗಿ ಬೇಕು. ಎಲ್ಲ ಜೀವರಾಶಿಗಳಲ್ಲಿ ಮನುಷ್ಯರಿಗೆ ಮಾತ್ರ ತಪ್ಪು ಸರಿ ಅರ್ಥಮಾಡಿಕೊಳ್ಳುವ ವಿವೇಚನಾ ಶಕ್ತಿ ಇದೆ. ಮಾನವರಾಗಿರುವ ನಾವು ಮಾನವೀಯತೆ ರೂಢಿಸಿಕೊಳ್ಳಬೇಕಾಗಿದೆ. ಆಧುನಿಕತೆಯತ್ತ ನಾವೆಲ್ಲರೂ ದಾಪುಗಾಲಿಡುತ್ತಿದ್ದೇವೆ. ನಮ್ಮ ದೇಶ ತಂತ್ರಜ್ಞಾನದಲ್ಲಿ ಇಷ್ಟು ಪ್ರಗತಿ ಸಾಧಿಸಿದ್ದೇವೆ ಎಂದು ಅಂಕೆ ಸಂಖ್ಯೆಗಳ ದಾಖಲೆಗಳನ್ನು ನೀಡುತ್ತಿದ್ದೇವೆ. ಆದರೆ ಮಾಯವೀಯತೆಯನ್ನು ಹಿಂದೆ ಸರಿಸುತ್ತಿದ್ದೇವೆ ಯಾರಿಗೂ ತಿಳಿಯಲೇ ಇಲ್ಲ. ಎಲ್ಲೆಂದರಲ್ಲಿ ಕೊಲೆ, ಅತ್ಯಾಚಾರ, ದರೋಡೆ ನಡೆಯುತ್ತಿದೆ. ನಾಳೆ ಅರಳಬೇಕಾಗಿದ್ದ ಹೂವನ್ನು ಇವತ್ತೇ ತಮ್ಮ ಹುಚ್ಚು ಬಯಕೆಯ ಈಡೇರಿಕೆಗಾಗಿ ಹೊಸಕಿ ಹಾಕುತ್ತಿದ್ದೇವೆ. ಇದ್ಯಾವ ನ್ಯಾಯ. ತಮ್ಮ ಮನೆಯ ಮಕ್ಕಳು ಸುರಕ್ಷಿತರಾಗಿರಬೇಕು. ಇನ್ನೊಬ್ಬರ ಮನೆಯ ಹೆಣ್ಣುಮಕ್ಕಳು ಏನಾದರೇನು ಎನ್ನುವ ಅಸಡ್ಡೆ ಎಲ್ಲ ಕಡೆ ತಾಂಡವಾಡುತ್ತಿದೆ. ಇದೇನಾ ಮಾನವೀಯತೆ? ಇನ್ನೊಬ್ಬರ ನೋವನ್ನು ಬರಿ ಟಿವಿ ಪೇಪರ್‌ನಲ್ಲಿ ನೋಡಿದಾಕ್ಷಣ ಅಯ್ಯೋ ಎಂದಾಕ್ಷಣ ನಮ್ಮ ಕೆಲಸ ಮುಗಿಯಲಿಲ್ಲ. ನಾಳೆ ಅದೇ ನೋವು ನಮ್ಮ ಪಾಲಿಗೆ ಬಂದಾಗ ಆ ನೋವಿನ ನಿಜಾರ್ಥ ನಮಗೆ ಅರಿವಿಗೆ ಬರುತ್ತದೆ. ಇದೆಲ್ಲ ಈಗ ಸರ್ವೇ ಸಾಮಾನ್ಯ ಎಂದು ಕೈಕಟ್ಟಿ ಕುಳಿತರೆ ನಡೆಯುವುದಿಲ್ಲ. ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾಗಿದೆ. ಆ ಕಲ್ಲು ಮನಸ್ಸುಗಳು ಎನ್ನುವುದಕ್ಕಿಂತ, ವಿಕೃತ ಹೃದಯಗಳ ಮನೋಸ್ಥಿತಿ ಬದಲಾಗಬೇಕಿದೆ. ಮಾನವೀಯತೆಯ ನೆಲಗಟ್ಟು ನಿಜಾರ್ಥದಲ್ಲಿ ಅವರ ಮನಸ್ಸಿನಲ್ಲಿ ನೆಲೆಯೂರಬೇಕಾಗಿದೆ.

ಎಲ್ಲ ಧರ್ಮದ ಸಾರವೇ ಮಾನವೀಯತೆ. ಅದನ್ನು ಬಿಟ್ಟು ಮತ್ತೆಲ್ಲವನ್ನು ನಾವು ಪಾಲಿಸಿಕೊಂಡು ಬರುತ್ತಿದ್ದೇವೆ. ಶ್ರಮಿಕರಿಗೆ ಬೆಲೆ ಇರಲಿ, ಬಡವರ ಬಗ್ಗೆ ಕಾಳಜಿ ಇರಲಿ.. ದುಡ್ಡು ಮಾಡೋದು ಒಂದೇ ಜೀವನವಲ್ಲ. ದುಡ್ಡಿಗಿಂತಲೂ ದೊಡ್ಡದಾದದ್ದು ಮಾನವೀಯತೆ. ಸಹಾಯ ಮಾಡದ ಮನುಷ್ಯ ಬದುಕಿದ್ರೂ ಸತ್ತಂತೆ, ವ್ಯರ್ಥ ಜೀವನ ಸಾಗಿಸೋ ಬದಲು ಬದುಕಿರುವಾಗ ನಾಲ್ಕು ಜನರಿಗೆ ಸಹಾಯ ಮಾಡಿದ್ರೆ ನಾವು ಸತ್ತಿದ್ದರೂ ಬದುಕಿದ್ದಂತೆ.

ಇವತ್ತಿನ ಮಕ್ಕಳಿಗೆ ಬೇಕಾಗಿರೋದು ಲ್ಯಾಪ್‌ಟಾಪ್ ಅಲ್ಲ. ಮಕ್ಕಳಿಗೆ ಬೇಕಾಗಿರೋದು ಜೀವನ ಮೌಲ್ಯದ ಪಾಠ. ಒಂದು ದಿನ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಭೂಪಟದ ಚಿತ್ರವನ್ನು ನೀಡಿ ಇದರಲ್ಲಿ ಹಿಂದೂಸ್ಥಾನದ ಭಾಗವನ್ನು ಚಿತ್ರಿಸಿ ಅಂದರಂತೆ, ಒಂದು ಹುಡುಗನನ್ನು ಬಿಟ್ಟು ಮತ್ತೆ ಎಲ್ಲ ಮಕ್ಕಳು ಹಿಂದೂಸ್ಥಾನದ ಭೂಪಟವನ್ನು ಚಿತ್ರಿಸುವುದರಲ್ಲಿ ವಿಫಲರಾದರಂತೆ. ಒಬ್ಬನೇ ಒಬ್ಬ ಹುಡುಗ ಹಿಂದೂಸ್ಥಾನದ ಚಿತ್ರವನ್ನು ಚಿತ್ರಿಸಿ ಶಿಕ್ಷಕರಿಗೆ ತಂದು ತೋರಿಸಿದನಂತೆ. ಆಗ ಶಿಕ್ಷಕರು ಇದು ನಿನ್ನಿಂದ ಹೇಗೆ ಸಾಧ್ಯವಾಯಿತು ಎಂದು ಕೇಳಿದರಂತೆ ಆ ಹುಡುಗನಲ್ಲಿ. ಆಗ ಆ ಹುಡುಗ ಅಂದನಂತೆ ಏನಿಲ್ಲ ಟೀಚರ್ ಭೂಪಟದ ಹಿಂದೆ ಒಂದು ಮನುಷ್ಯನ ಆಕಾರವಿದೆ. ನಾನು ಆ ಮನುಷ್ಯನನ್ನು ಜೋಡಿಸುತ್ತ ಹೋದಂತೆ ಹಿಂದೂಸ್ಥಾನದ ಭೂಪಟ ಸಿದ್ಧವಾಯಿತು ಅಂದನಂತೆ.

ನಮ್ಮ ನೆರೆಯವರನ್ನು ನಮ್ಮವರಂತೆಯೇ ಪ್ರೀತಿಸಬೇಕು. ಪ್ರತಿಯೊಬ್ಬರ ನೋವಿನಲ್ಲೂ ನಾವು ಭಾಗಿಗಳಾಗಬೇಕು. ಇವತ್ತು ನಾವು ನೀಡಿದ ಸಹಾಯಹಸ್ತ ನಾಳೆ ನಮಗೆ ಅಭಯಹಸ್ತವಾಗುತ್ತದೆ. ಅಮೇರಿಕಾದ ಅಧ್ಯಕ್ಷ ರೋನಾಲ್ಡ್ ರೇಗಾನ್ ಅವರು ಇಂಗ್ಲೀಷಿನಲ್ಲಿ ಒಂದು ಮಾತನ್ನು ಹೇಳುತ್ತಾರೆ "We can't help everyone, but everyone can help someone". ಎಷ್ಟೊಂದು ಅರ್ಥಪೂರ್ಣವಾದುದು ಈ ಮಾತು. ಕುವೆಂಪುರವರ ವಿಶ್ವಮಾನವ ಸಂದೇಶ ನಮ್ಮೆಲ್ಲರ ಬಾಳಿನ ಗುರಿಯಾಗಬೇಕು.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
\- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎ 24037065
Email:
mysoreassociation.mumbai @gmail.com
Website:
www.mysoreassociation.in

(ಕಳೆದ ಸಂಚಿಕೆಯಿಂದ)

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

**ಕಂಬಳಿ, ಹೊಗೆಸೊಪ್ಪು, ಹೊಗೆ ಗಂ(ಕಿಂ)ಡಿ:** ಅಂದು ಮಳೆಗಾಲ, ಛಳಿಗಾಲಗಳಲ್ಲಿ ಈಗಿನಂತೆ ಉಣ್ಣೆಯ ರಗ್ಗುಗಳಿರಲಿಲ್ಲ. ರಗ್ಗುಗಳ ಅಭಾವದ ಕಾಲ. ಎಲ್ಲರ ಮನೆಯಲ್ಲೂ ಸೊಪ್ಪು ಕಂಬಳಿ ಮತ್ತು ಝಾಡಿ ಹೊದೆಯುವುದು ರೂಢಿಯಲ್ಲಿತ್ತು. ಮಳೆಗಾಲ ಪ್ರಾರಂಭಕ್ಕೆ ಮುಂಚೆ 'ದಾವಣಗೆರೆ ಕಂಬಳಿ' ಎಂದು ರಸ್ತೆಯಲ್ಲಿ ಕೂಗುತ್ತಾ ಬರುತ್ತಿದ್ದು, ಉತ್ತಮವಾದ ಹೊದೆಯುವ ಝಾಡಿಗಳನ್ನು ಮತ್ತು ಕಂಬಳಿಗಳನ್ನು ತರುತ್ತಿದ್ದರು. ಝಾಡಿಗಳೆಂದರೆ ಉತ್ತಮವಾದ ನುಣುಪಾದ ಕುರಿ ಕೂದಲುಗಳಿಂದ ನವಿರು ದಾರ ಮಾಡಿಕೊಂಡು ನೇಯ್ದ ಕಂಬಳಿ. ಝಾಡಿಗಳು ಅಗಲದಲ್ಲಿಯೂ ಉದ್ದದಲ್ಲಿಯೂ ಕಂಬಳಿಗಳಿಂದ ಜಾಸ್ತಿ ಅಳತೆಯಲ್ಲಿ ಇರುತ್ತಿದ್ದು, ಇಬ್ಬರು ಹೊದ್ದು ಸಲೀಸು ನಿದ್ದೆ ಮಾಡಬಹುದಾಗಿತ್ತು. ಕಂಬಳಿಗಳು ಗಾತ್ರ ಮತ್ತು ಅಳತೆಯಲ್ಲಿ, ಗುಣದಲ್ಲಿ ಕಮ್ಮಿಯಾಗಿರುತ್ತಿದ್ದವು. ಸೊಪ್ಪು ಕಂಬಳಿ ಎಂದರೆ ಮಳೆಗಾಲದಲ್ಲಿ ಬೇಸಾಯದ ಕೆಲಸ ಕಾರ್ಯಕ್ಕಾಗಿ ಗೊಪ್ಪೆ ಮಾಡಿಕೊಂಡು ಸೂಡುವ (ಧರಿಸುವ) ಕಂಬಳಿ. ಕಾಲಕ್ರಮೇಣ ಬಯಲು ಸೀಮೆಯಿಂದ ವ್ಯವಸಾಯ ಕೆಲಸಕಾರ್ಯಗಳಿಗೆ ಸೂಡತಕ್ಕ ಕಂಬಳಿಗಳೇ ಬರುವುದು ಜಾಸ್ತಿಯಾಗಿ ಕಂಬಳಿ ಅಂಗಡಿಗಳು ಪ್ರಾರಂಭವಾದವು. ನಿಧಾನವಾಗಿ ರಗ್ಗುಗಳು ಬರಲು ಶುರುವಾಗಿ ನಾನಾ ತರಹದ ರಗ್ಗುಗಳು ಅಂಗಡಿಯಲ್ಲಿ ದೊರೆಯುವಂತಾಯಿತು. ಪ್ಲಾಸ್ಟಿಕ್ ಪ್ರವೇಶವಾದ ನಂತರ ಮಳೆಗಾಲಕ್ಕೆ ಕೆಲಸಕಾರ್ಯಗಳಿಗೆ ಉಪಯೋಗಿಸುವ ಸೊಪ್ಪು ಕಂಬಳಿಗಳು ಬರುವುದು ಕಡಿಮೆಯಾಗಿ ಈಗ ಮಳೆಗಾಲದ ಎಲ್ಲಾ ಕೆಲಸಗಳಿಗೂ, ಎಲ್ಲಾ ಕೆಲಸಗಾರರೂ, ಅಂದರೆ ವ್ಯವಸಾಯದ ಕೂಲಿಗಳು, ಕಾಫಿ ಎಸ್ಟೇಟ್ ಕಾರ್ಮಿಕರು, ಗಾರೆಯವರು, ವಿದ್ಯುತ್ ಇಲಾಖೆಯವರು ಎಲ್ಲರೂ ಪ್ಲಾಸ್ಟಿಕ್ ಕವಚದಿಂದ ರಕ್ಷಣೆ ಪಡೆಯುವಂತಾಗಿದೆ.

ಇದರಂತೆ ಮಳೆಗಾಲಕ್ಕೂ ಮುನ್ನ ಬಯಲು ಸೀಮೆಯಿಂದ ಹೊಗೆಸೊಪ್ಪಿನ ಗಾಡಿಯವರು ಮಲೆನಾಡಿಗೆ ಹೊಗೆಸೊಪ್ಪನ್ನು "ಅಂಡಿಗ" ಲೆಕ್ಕದಲ್ಲಿ ಕಟ್ಟಿಕೊಂಡು ಗಾಡಿಗಟ್ಲೆ ಹೊಗೆಸೊಪ್ಪು ಹಳ್ಳಿಯ ಮೂಲೆ ಮೂಲೆಗಳಿಗೆ ವಿಲೇವಾರಿಯಾಗುತ್ತಿತ್ತು. ಒಂದು "ಅಂಡಿಗ" ಎಂದರೆ ತೂಕದಲ್ಲಿ ಒಂದು ಮಣವೋ (10 ಕಿಲೋ) ಎರಡು ಮಣವೋ ಇದ್ದು, ಈ ಅಂಡಿಗೆಯನ್ನು ಥಂಡಿ ಬಾರದಂತೆ ಯಾವುದೋ ಗರಿಕೆಯ ಚಾಪೆಯಲ್ಲಿ ಸುತ್ತಿ ತರುತ್ತಿದ್ದರು. ನಾನೂ ಇಂತಹ ಅಂಡಿಗೆಗಳನ್ನು ನೋಡಿದ್ದೇನೆ. ಈಗಲೂ ಬಯಲು ಸೀಮೆಯಿಂದ ಲಾರಿಗಳಲ್ಲಿ ಹಳ್ಳಿಗಳ ಕಡೆ ಸಪ್ಲೈ ಮಾಡುತ್ತಿದ್ದಾರೆ. ಈ ಹೊಗೆಸೊಪ್ಪಿ ಅಂಡಿಗೆಗಳು ಮಲೆನಾಡಿನ ಮಳೆ ಥಂಡಿಗೆ ಹಾಳಾಗಬಾರದೆಂದು ಇದನ್ನು ಕ್ರಯಕ್ಕೆ ಪಡೆದವರು ತಮ್ಮಗಳ ಮನೆ ಭತ್ತದ ಕಣಜದಲ್ಲೋ, ಪಣತದಲ್ಲೋ ಅಥವಾ ಕಂಬಳಿ ಹಾಸಿಗೆ ಮಾಡಿ ಕಂಬಳಿ ಸುರುಳಿಯಲ್ಲೋ ಈಗಲೂ ಮಳೆಗಾಲದಲ್ಲಿ ಬೆಚ್ಚಗೆ ಇಡುತ್ತಾರೆ.

ಹಿಂದೆ ಮಲೆನಾಡಿನಲ್ಲಿ ಸಾಗಣೆ ಸಂಪರ್ಕವಿರಲಿಲ್ಲ. ರಸ್ತೆಗಳು ಸರಿ ಇರಲಿಲ್ಲ. ಕೆಲವು "ಹಳ್ಳಿ" ಎಂದು ಕರೆಯಲ್ಪಡುವ ಮನೆಗಳಿಗೆ ರಸ್ತೆಯೇ ಇರಲಿಲ್ಲ. ಹೀಗಾಗಿ ವಾಹನಗಳ ಅಭಾವ ಮತ್ತು ಕೃಷಿಕಾರ್ಯಗಳ ಒತ್ತಡದಿಂದಾಗಿ ಬೇರೆಯ ಕೆಲಸಕಾರ್ಯಗಳಿಗೆ ಕಾಲಾವಕಾಶವಿರುತ್ತಿರಲಿಲ್ಲ. ಆದ್ದರಿಂದ ಮಳೆಗಾಲಕ್ಕಾಗಿ ಸಾಂಬಾರ ದಿನಸಿಗಳನ್ನು ಮಳೆಗಾಲದ ಲಾಗಾಯ್ತು ಬೇಸಿಗೆಯ ಪರ್ಯಂತ ಉಪಯೋಗಕ್ಕೆ ಬರುವಂತೆ ಬಹಳ ಜಾಸ್ತಿ ಕಾಳು, ಬೇಳೆ, ಉಪ್ಪು, ಒಣಮೆಣಸಿನಕಾಯಿ, ಹುಣಿಸೇಹಣ್ಣು, ಬೆಲ್ಲದ ಡಬ್ಬಗಳು, ಒಣಗಿಸಿದ ವಾಟೆ ಹುಳಿ ತೆಪ್ಪೆ ಮುಂತಾಗಿ ಕೊಂಡು ಅಥವಾ ಕೆಲವನ್ನು ಸ್ವಂತವಾಗಿ ಬೆಳೆದು ಬೆಚ್ಚಗಿನ ಜಾಗದಲ್ಲಿ ದಾಸ್ತಾನುಪಡಿಸಿಕೊಳ್ಳುತ್ತಿದ್ದರು. ಧಾನ್ಯಗಳ ಕಾಳನ್ನು ಕೊಂಡಲ್ಲಿ, ಅದನ್ನು ತೊಳೆದು ಹಸೀ ಕೆಮ್ಮಣ್ಣು ಸವರಿ, ಬಿಸಿಲಿನಲ್ಲಿ ಹದವರಿತು ಒಣಗಿಸಿ ಒಡೆಯುವ ಕಲ್ಲಿನಲ್ಲಿ ಬೀಸಿ ಒಡೆದು ಬೇಳೆ ಮಾಡಿ, ಸಿಪ್ಪೆ ಮಣ್ಣನ್ನೆಲ್ಲಾ ಕೇರಿ, ತೂರಿ, ಪುನಃ ಬಿಸಿಲಿನಲ್ಲಿ ಒಣಗಿಸಿ ಡಬ್ಬಗಳಿಗೆ ಭರ್ತಿಮಾಡಿ ಪೂರ್ವದ ಮನೆಗಳಲ್ಲಿದ್ದ ಹೊಗೆ ಕಂಡಿ ಅಟ್ಟದಲ್ಲಿ ಕೂಡಿಡುತ್ತಿದ್ದರು. ಈ ತರಹ ಹೊಗೆ ಕಂಡಿಯಲ್ಲಿ ಕೂಡಿಡುವ ಕ್ರಮಕ್ಕೆ ಇಂದಿಗೂ ಕೆಲವು ಪದಾರ್ಥಗಳು ಒಳಪಟ್ಟಿವೆ. ಹೋಗಿ ಕಂಡಿ ಅಟ್ಟವೆಂದರೆ ಈಗಿನವರಿಗೆ ತಿಳಿಯದೆ ಆಶ್ಚರ್ಯವಾಗಬಹುದು. ವಾಸದ ಮನೆ, ಇದು ಹೆಂಚಿನದಾಗಿ ಇರಬಹುದು, ಸೋಗೆ ಅಥವಾ ಹುಲ್ಲು ಮನೆ ಇರಬಹುದು, ಪೂರ್ವದ ಮನೆಗಳಲ್ಲಿ ಅಡುಗೆ ಮನೆಯ ಒಲೆಯ ಮೇಲೆ ಹಲಗೆಗಳಲ್ಲಿ ಉದ್ದುದ್ದ ಕಂಡಿಗಳನ್ನು ಆಚಾರಿ ಮೂಲಕ ಮಾಡಿಸಿ ಅಡುಗೆ ಮನೆ ಹೆಂಚಿನ ಮನೆಯಾಗಿ ನಾಟಾ ಹಾಕಿದ್ದಾದರೆ ಉಪ್ಪರಿಗೆಯಲ್ಲೋ, ಸೋಗೆ ಮನೆಯಾದರೆ ಬಿದಿರುಗಳ ಹಾಕಿಯೋ ಮಾಡಿದ ಅಟ್ಟದಲ್ಲಿ ಅಂತೂ ಒಲೆ ಹೊಗೆಯಾಡುತ್ತಾ ಬೆಚ್ಚಗಿರುವ ಜಾಗಕ್ಕೆ 'ಹೊಗೆ ಕಂಡಿ ಪ್ರದೇಶ' ವೆನ್ನುತ್ತಾರೆ. ಇಲ್ಲಿ ಮಳೆಗಾಲ ಬೇಸಿಗೆ ಸೌದೆ ಒಲೆಯ ಬೆಂಕಿ ಮತ್ತು ಹೊಗೆ ಇರುತ್ತಾದ್ದರಿಂದ ಯಾವುದೇ ಕೂಡಿಟ್ಟ ವಸ್ತು ಹಾಳಾಗುವುದಿಲ್ಲ. ಉಪ್ಪಿನಕಾಯಿ ಭರಣಿಗಳನ್ನು ಸಹ ಈ ಜಾಗದಲ್ಲಿ ದಾಸ್ತಾನಿಡುವುದು ವಾಡಿಕೆಯಲ್ಲಿತ್ತು. ಹೀಗೆ ದಾಸ್ತಾನು ಮಾಡಿದ ವಸ್ತುಗಳು ಥಂಡಿಯಿಂದ ಹಾಳಾಗದೆ ಶುಚಿಯಾಗಿಯೂ 'ಗರಂಗರ" ಆಗಿಯೂ ಇರುತ್ತಿದ್ದವು.

**ಮಲೆನಾಡಿನಲ್ಲಿ ಹಿಂದೆ ಇದ್ದ ಗ್ರಾಮೀಣ ವ್ಯಕ್ತಿಗಳು:** ಹಿಂದೆ ಮಲೆನಾಡಿನಲ್ಲಿ ಪಾದರಕ್ಷೆ ಉಪಯೋಗಿಸುವವರ ಸಂಖ್ಯೆ ಕಮ್ಮಿ ಇತ್ತು. ಮನೆ ಯಜಮಾನರು ಹೆಚ್ಚಾಗಿ ಪಾದರಕ್ಷೆ ಉಪಯೋಗಿಸುತ್ತಿದ್ದರು. ಪಾದರಕ್ಷೆಗೆ 'ಮೆಟ್ಟು' ಎಂಬ ಗ್ರಾಮ್ಯ ಶಬ್ದವಿದೆ. ಇತರ ಸದಸ್ಯರು ಮನೆಯಲ್ಲಿ ಬರಿಗಾಲಿನಲ್ಲಿ ನಡೆಯುವುದೇ ಜಾಸ್ತಿಯಾಗಿತ್ತು. ಈಗ ತಯಾರಾಗಿ ಬರುತ್ತಿರುವ, ಕಣ್ಣಿಗೆ ಸುಂದರವಾಗಿ ಕಾಣುವ ಪ್ಲಾಸ್ಟಿಕ್ ಮೆಟ್ಟುಗಳಿರಲಿಲ್ಲ. ಸಾಧಾರಣವಾಗಿ ಊರಿಗೊಬ್ಬ ಚಮ್ಮಾರನಿರುತ್ತಿದ್ದ. ಆತ ತನ್ನ ಮನೆಯಲ್ಲೋ ಅಥವಾ ಮನೆ ಮುಂದಿರುವ ಮರದ ಬುಡದಲ್ಲೋ ಮೆಟ್ಟಿಗೆ ಲಾಯಕ್ಕಾದ ಹದ ಮಾಡಿದ ಜಾನುವಾರು ಚರ್ಮ, ಹುರಿ, ಮೆಟ್ಟು ತಯಾರಿಕೆಗೆ ಅವಶ್ಯಕವಾದ ಹತಯಾರುಗಳನ್ನು ಸಿದ್ಧಪಡಿಸಿಕೊಂಡು ಹಳ್ಳಿಯಲ್ಲಿ ಅಪೇಕ್ಷೆ ಪಟ್ಟವರಿಗೆ ಅವರುಗಳ ಕಾಲುಗಳ ಅಳತೆಗೆ ಸರಿಯಾಗಿ ಮೆಟ್ಟು ತಯಾರಿಸಿಕೊಡುತ್ತಿದ್ದ. ಮತ್ತೂ ಕೆಲವು ಕಡೆ ಚಮ್ಮಾರರು ಮೆಟ್ಟಿಗೆ ಹರಳೆಣ್ಣೆ ಇಲಾಜ್ ಸಹಾ ಮಾಡಿಕೊಡುತ್ತಿದ್ದರು. ಇಂತಹ ಮೆಟ್ಟುಗಳು ನಾಲ್ಕೈದು ವರ್ಷಗಳು ಬಾಳಿಕೆ ಬರುತ್ತಿದ್ದವು. ಈಗಿನಂತೆ ಝುಗಝುಗಿಸುವ ಬಲವಾದ ರಟ್ಟಿನಷ್ಟು ದಪ್ಪವಿದ್ದು ತುಂಬಾ ಮಣಿ ಬಂಗಾರದ ಬಣ್ಣದ ಸರಪಳಿಗಳಿಂದ ಅಲಂಕೃತವಾಗಿ, ಉಂಗುಷ್ಠ, ಹಿಮ್ಮಡಿಗಳು ಕೇವಲ ಅಂಗಡಿಯಿಂದ ಮನೆಗೆ ಬರುವಾಗಲೇ ಕಿತ್ತುಬರುವ, ಕೇವಲ ಗಾಜು ಅಥವಾ ನಯಾ ನೆಲದಮೇಲೆ ಎಚ್ಚರಿಕೆಯಿಂದ ಓಡಾಡಲು ಲಾಯಕ್ಕಿರುವ ಆಗಾಗ ಹೊಸದಾಗಿ ಪಡೆಯಬೇಕಾಗಿ ಬಂದಲ್ಲಿ ತಕ್ಷಣ ದೊರೆಯಬಹುದಾದ ಅಂಗಡಿಗಳು ಆಗಿರಲಿಲ್ಲ. ಬೆಲೆಯೂ ಸಹ ಚಮ್ಮಾರರ ಮೆಟ್ಟಿನ ನಾಲ್ಕರಷ್ಟು ಬೆಲೆಯಾಗಿ ದುಡ್ಡಿನ ಚಲಾವಣೆ ಹಾಲಿ ಜಾಸ್ತಿ ಇರುವುದರಿಂದ ಕೊಳ್ಳಲು ಅಗ್ಗವೆನ್ನುತ್ತಾರೆ. ಜನರು ನೆಮ್ಮದಿಯಿಂದ ಚರ್ಮದ ಪಾದರಕ್ಷೆಗಳಲ್ಲಿಯೇ ತಿರುಗಾಡುತ್ತಿದ್ದ ಕಾಲ ಒಂದಿತ್ತು.

ಇನ್ನು "ಭದ್ರಾಕರಣ'ದ ವಿಷಯಕ್ಕೆ ಬಂದರೆ ಅಂದರೆ ಪೂರ್ವದಲ್ಲಿ"ಆಯುಷ್ಕರ್ಮ"ವೆಂದು ವಾಡಿಕೆಯಾಗಿ ಹೇಳುತ್ತಿದ್ದ "ಕ್ಷೌರಕರ್ಮ"ಕ್ಕೆ ಬಂದರೆ ಈಗಿನಂತೆ ನಾನಾ ವಿಧದ ಮೆತ್ತೆ ಸೋಫಾ, ಆಳೆತ್ತರದ ನಿಲುಗನ್ನಡಿಗಳು, ಫ್ಯಾನ್, ಟಿವಿ, ಅತ್ಯಾಧುನಿಕ ಚೌರದ ಮಿಷನ್ ಗಳು, ಘಮಘಮಿಸುವ ಚೌರದ ಸೋಪುಗಳು, ತಮ್ಮ ಸರದಿಗಾಗಿ ಕಾಲ ಕಳೆಯಲು ಓದುವುದಕ್ಕಾಗಿ ಅಂದಂದಿನ ವರ್ತಮಾನ ಪತ್ರಿಕೆಗಳು ಇರುವ 'ಸಲೂನ್' ಎಂದು ನಾಮಕರಣವಿರುವ ಚೌರದ ಅಂಗಡಿಗಳು ಇರದಿದ್ದ ಕಾಲವದಾಗಿತ್ತು. ಚೌರದವನು ಅಥವಾ ನಾಯಿಂದ, ಭಂಡಾರಿ ಅಥವಾ ಸವಿತಾ ಸಮಾಜದವನೆನ್ನಿ ಈತ ಆ ಕಾಲದಲ್ಲಿ ತನ್ನ ವೃತ್ತಿಯ ಚೌರದ ಸಾಮಾನುಗಳನ್ನು ಒಂದು ಹಿತ್ತಾಳೆ ಡಬ್ಬಿ ( ಈ ಡಬ್ಬಿಗೆ ಅಂದು 'ಹಡ"ವೆಂದು ಹೇಳುತ್ತಿದ್ದರು)ಯಲ್ಲಿಟ್ಟುಕೊಂಡು, ಆತ ಮಾಮೂಲಾಗಿ ಹೋಗುವ ಮನೆಗಳಿಗೆ ಬೆಳಿಗ್ಗೆ ನಸುಕಿನಲ್ಲಿ ಹೋಗಿ ತನ್ನ ಕೆಲಸ ಪೂರೈಸಿಕೊಂಡು ಪುರುಸೊತ್ತಾದೊಡನೆ ನಿರ್ದಿಷ್ಟ ಜಾಗದಲ್ಲಿ (ಸಾಧಾರಣವಾಗಿ ಮರದ ಬುಡವೇ ಜಾಸ್ತಿ) ಠಿಕಾಣಿ ಹೂಡಿ ಬಂದವರಿಗೆ ತನ್ನ ಕೆಲಸ ಮುಂದುವರಿಸುತ್ತಿದ್ದ. ಕೆಲವು ಕ್ಷೌರದವರಿಗೆ ಹಳ್ಳಿಕಡೆ ಗುತ್ತಿಗೆ ಸಹಾಯ ಇತ್ತು. ಅಂದರೆ ಈತ ಹಳ್ಳಿ ಮನೆಗಳಿಗೆ ನಿರ್ದಿಷ್ಟ ದಿನಗಳಲ್ಲಿ ಹೋಗಿ ಹಳ್ಳಿ ಜನರ ಭದ್ರಾಕರಣ ಮಾಡಿ ಬರುತ್ತಿದ್ದ. ಈ ಕೆಲಸಕ್ಕೆ ಪ್ರತಿಯಾಗಿ ಈತನಿಗೆ ನಗದಿ ಹಣ ಪ್ರಾಪ್ತಿ ಇರಲಿಲ್ಲ. ವರ್ಷಕ್ಕೊಂದು ಬಾರಿ ಸುಗ್ಗಿಕಾಲದಲ್ಲಿ ಭತ್ತವನ್ನೋ, ಅಡಿಕೆಯನ್ನೋ ಕೊಡುತ್ತಿದ್ದರು. ಹೀಗಿತ್ತು ಮಲೆನಾಡಿನ ಚೌರವೃತ್ತಿ. ಮಲೆನಾಡಿನ ಚೌರದವನು ಹಳ್ಳಿಯ ಗೂಢಚಾರನೂ ಆಗಿರುತ್ತಿದ್ದನಂತೆ.

ಇದರಂತೆ ಮಲೆನಾಡಿನಲ್ಲಿ ಮಡಿವಾಳರೂ ಅಲ್ಲಲ್ಲಿ ಇರುತ್ತಿದ್ದು ಹಬ್ಬಗಳ ಸಮಯ ಅಥವಾ ಲಗ್ನದ ಕಾಲಗಳಲ್ಲಿ, ಸೂತಕಾದಿ ಅಶೌಚಗಳಲ್ಲಿ, ರಥೋತ್ಸವ ಕಾಲಗಳಲ್ಲಿ ಬಟ್ಟೆ ಶುಚಿ ಮಾಡಿಕೊಡುವವರೂ ಇದ್ದರು.

ಲಗ್ನ ಮುಂತಾದ ಶುಭಕಾರ್ಯಗಳಿಗೆ ದೂರದಲ್ಲಿರುವ ಊರುಗಳಿಗೆ ಹೋಗಿ ವಾಲಗದವರನ್ನು ಕರೆದು ತರುವುದು ತುಂಬಾ ಅಪರೂಪವಿತ್ತು. ಹತ್ತಿರವಿರುವ ಹಳ್ಳಿಗಳಲ್ಲಿ ಅಲ್ಲಲ್ಲಿ ವಾದ್ಯದವರುಗಳಿದ್ದು ಮಂಗಳಕಾರ್ಯ ನಡೆಸಿಕೊಡುತ್ತಿದ್ದರು. ಗ್ರಾಮೀಣ ವೃತ್ತಿಯಾದ ಕುಂಬಾರಿಕೆ ಸಂಬಂಧ ಮಲೆನಾಡಿನಲ್ಲಿ ತುಂಬಾ ಕುಂಬಾರರರು ಕುಟುಂಬಗಳು ಇರುತ್ತಿದ್ದವು. ಈಗಲೂ ಇವೆ. ಆ ಕಾಲದ ಕುಂಬಾರ ಕುಟುಂಬಗಳು ಅಲ್ಪಸ್ವಲ್ಪ ವ್ಯವಸಾಯ ಮಾಡುತ್ತಾ ಬಿಡುವಿನ ಕಾಲದಲ್ಲಿ ಮಡಿಕೆಗಳು, ಗೌರಿ ಪೂಜೆಗೆ ಬೇಕಾದ ಕುಡಿಕೆಗಳು, ಎಣ್ಣೆ ದೀಪದ ಹಣತೆಗಳು, ಊಟದ ತಟ್ಟೆ ಬಟ್ಟಲುಗಳನ್ನು ಮಾಡುತ್ತಾ ಅಗತ್ಯವಿದ್ದವರಿಗೆ ಅಗತ್ಯ ಕಾಲದಲ್ಲಿ ಮಾಡಿಕೊಡುತ್ತಾ ಕಾಲಾಯಾಪನೆ ಮಾಡುತ್ತಿದ್ದರು. ಪೂರ್ವದಲ್ಲಿ ಮಲೆನಾಡಿನಲ್ಲಿ ಹಾಲು ಮೊಸರಿನ ಉಪಯೋಗಕ್ಕೆ ಮಣ್ಣಿನ ಮಡಕೆಯನ್ನು ಉಪಯೋಗಿಸುವ ಕಾಲವಿತ್ತು. ಮೊಸರು ಮಾಡಲು, ಹಾಲು ಹೆಪ್ಪು ಹಾಕಲು ಮಣ್ಣಿನ ಮಡಿಕೆಯೇ ವಿಶೇಷ, ಆರೋಗ್ಯಕ್ಕೂ ಒಳ್ಳೆಯದು ಎಂದು ತಿಳಿದಿದ್ದರು. ಅಗತ್ಯಕ್ಕಿಂತ ಹೆಚ್ಚಿಗೆ ಹುಳಿ ಈ ಮಣ್ಣಿನ ಪಾತ್ರೆಯಲ್ಲಿ ಆಗುತ್ತಿರಲಿಲ್ಲ.

ಪ್ರತಿ ಹಳ್ಳಿಯಲ್ಲೂ ಕಮ್ಮಾರರು ಮಾತ್ರ ಇದ್ದೇ ಇರುತ್ತಿದ್ದರು. ವ್ಯವಸಾಯವೇ ಪ್ರಧಾನವಾದ ಮಲೆನಾಡಿಗೆ ಕತ್ತಿ, ಕೊಡಲಿ, ಹಾರೆ, ಪಿಕಾಸಿ ಮುಂತಾದುವುಗಳ ರಿಪೇರಿ, ಹಣಿಯುವುದು, ಹೊಸತನ್ನು ತಯಾರು ಮಾಡುವುದು ಮುಂತಾಗಿ ಗ್ರಾಮೀಣ ಹಳ್ಳಿಯ ವ್ಯವಸಾಯ ರಂಗದಲ್ಲಿ ಇವರದು ಒಂದು ಪಾತ್ರ ಇರುತ್ತಿತ್ತು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

# ವೈವಿಧ್ಯಮಯ ವಿಯೆಟ್ನಾಂ

✍ ವಿನುತ ಟಿ. ಸಿ. & ಪ್ರಸಾದ್ ಟಿ. ಎಲ್.

ವಿಯೆಟ್ನಾಂ ಎಂದಾಕ್ಷಣ, ನಮಗೆ ನೆನಪಾಗುವುದು 1954 ರಿಂದ 1975 ರ ತನಕ ನಡೆದ ವಿಯೆಟ್ನಾಂ ಸಂಗ್ರಾಮ. ಉತ್ತರ ವಿಯೆಟ್ನಾಂ ನ ಕಮ್ಯುನಿಸ್ಟ್ ಸರ್ಕಾರ ಮತ್ತು ದಕ್ಷಿಣ ವಿಯೆಟ್ನಾಂ ಅಮೇರಿಕಾ ಮಧ್ಯೆ ಈ ಯುದ್ಧವು ಬಹಳ ವರ್ಷಗಳವರೆಗೆ ನಡೆದಿರುತ್ತದೆ. ವಿಯೆಟ್ನಾಂ ಸಂಗ್ರಾಮಕ್ಕೆ ಮೂಲಕಾರಣ ಅಮೇರಿಕಾ ಮತ್ತು ರಷ್ಯಾದ ನಡುವಿನ 'ಶೀತಲ ಸಮರ' ಹಾಗೂ ಉತ್ತರ ವಿಯೆಟ್ನಾಂನ ಉದ್ಧಟತನ!! ಇಂದಿನ ವೈವಿಧ್ಯಮಯ ವಿಯೆಟ್ನಾಂ ಸಂಸ್ಕೃತಿ ಈ ಎಲ್ಲಾ ಹಂತಗಳಿಂದ ರೂಪುಗೊಂಡಿದೆ.

'ಸಾಮಿಗಾನ್' ಅಥವಾ 'ಹೋ ಚಿ ಮಿನ್ಹ್' ಪ್ರಾಂತ್ಯವು ದಕ್ಷಿಣ ವಿಯೆಟ್ನಾಂನ ಪ್ರಸಿದ್ಧ ನಗರವಾದರೆ 'ಹನೋಮಿ' ಉತ್ತರ ವಿಯೆಟ್ನಾಂನ ಮುಖ್ಯ ನಗರವಾಗಿದೆ. 'ಹನೋಮಿ' ವಿಯೆಟ್ನಾಂನ ರಾಜಧಾನಿಯಾದರೆ 'ಸಾಯಿಂಗಾನ್' ವಿಯೆಟ್ನಾಂನ ಪ್ರಮುಖ ವಾಣಿಜ್ಯ ನಗರ. ವಿಯೆಟ್ನಾಂ ಭಾರತ ದೇಶದ ಪ್ರಮುಖ ಸಹಯೋಗಿ ದೇಶಗಳಲ್ಲಿ ಒಂದಾಗಿದೆ. ನಮ್ಮ ಪರಮಾಣು ಇಲಾಖೆಯ ವತಿಯಿಂದ ಈ ದೇಶಕ್ಕೆ ಒಂದು 'ನ್ಯೂಕ್ಲಿಯರ್ ಸ್ಥಾವರ'ವನ್ನು ಕೊಡಲು 2015 ರಲ್ಲಿ ಒಪ್ಪಂದವಾಗಿರುವುದು ವಿಶೇಷ. ಮತ್ತೊಂದು ವಿಶೇಷವೆಂದರೆ, ನಮ್ಮ ಪರಮಾಣು ಇಲಾಖೆಯ ವತಿಯಿಂದ, ತಂತ್ರಜ್ಞಾನ ಆಧಾರಿತ 'ಭಾಭಾಟ್ರಾನ್ -II' ಯಂತ್ರವನ್ನು I.A.E.A (ಇಂಟರ್ ನ್ಯಾಷನಲ್ ಅಟಾಮಿಕ್ ಎನರ್ಜಿ ಅಸೋಸಿಯೇಶನ್) ಮುಖಾಂತರ ಕ್ಯಾನ್ಸರ್ ಚಿಕಿತ್ಸೆಗಾಗಿ ಉಡುಗೊರೆಯಾಗಿ ಕೊಡಲಾಗಿದೆ. ಈ ಎಲ್ಲಾ ಕಾರಣಗಳಿಂದ, NITK ಯ ಹಳೇ ವಿದ್ಯಾರ್ಥಿಗಳ ಸಂಘ, ವಿಯೆಟ್ನಾಂ ದೇಶದ ಪ್ರವಾಸದ ಬಗ್ಗೆ ತಿಳಿಸಿದಾಗ, ಈ ದೇಶವನ್ನು ನೋಡುವ ಕುತೂಹಲ ಮೂಡಿತು.

ವೈವಿಧ್ಯಮಯೀ ವಿಯೆಟ್ನಾಂನ ವಿವಿಧ ಪ್ರವಾಸಿ ತಾಣಗಳು ಮತ್ತು ವಿವರಗಳು ಕೆಳಗಿನಂತಿವೆ.

**ದಕ್ಷಿಣ ವಿಯೆಟ್ನಾಂ:** ಪ್ರವಾಸದ ಆರಂಭಿಕ ಎರಡು ದಿನಗಳು ದಕ್ಷಿಣ ಪ್ರಾಂತ್ಯದಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿತ್ತು. ಭಾರತದ ಒಂದು ರೂಪಾಯಿಗೆ ಈ ದೇಶದ 330 'ಡಾಂಗ್'ಗಳಿಗೆ ಸಮ. ಹಾಗಾಗಿ ನಾವೆಲ್ಲ ನಾಲ್ಕು ದಿನದ ಮಟ್ಟಿಗೆ ಲಕ್ಷಾಧಿಪತಿಗಳು!!



**ಭೂಗತ ಸುರಂಗಗಳು:** (Tunnels De Cu Chi): ಈ ಸುರಂಗಗಳು 'ವಿಯೆಟ್ ಕಾಂಗ್' ಕಾದಾಳುಗಳು ಅಡಗಿಕೊಳ್ಳಲು ಮಾಡಿರುವ ವ್ಯವಸ್ಥೆ. ಇವು 'ಹೋಚಿ ಮಿನ್ಹಾ' ನಗರದ 'ಕ್ಯುಚಿ' ಜಿಲ್ಲೆಯಲ್ಲಿದೆ. ವಿಯೆಟ್ನಾಂ ಯುದ್ಧದ ವೇಳೆಯಲ್ಲಿ ಶತ್ರುಗಳಿಂದ ಪಾರಾಗಲು ಮತ್ತು ಶತ್ರುಗಳನ್ನು ಎದುರಿಸಲು ವಿಯೆಟ್ನಾಂನ ಯುದ್ಧಾಳುಗಳಿಂದ ನಿರ್ಮಿಸಲ್ಪಟ್ಟ ಈ ಭೂಗರ್ಭಿತ ಸುರಂಗಗಳು ಬಹಳ ಕುತೂಹಲಕಾರಿಯಾಗಿವೆ. ಈ ಸುರಂಗಗಳ ಒಳ ಹೊಕ್ಕಲು 'ಕಳ್ಳನ ಕಿಂಡಿ'ಯ ಅಂದಾಜು ಕೊಡುತ್ತದೆ. ಒಂದು ವೇಳೆ ಶತ್ರುಗಳು ಒಳನುಗ್ಗಲು ಪ್ರಯತ್ನ ಮಾಡಿದರೆ, ಅವರನ್ನು ಸೆರೆಹಿಡಿಯಲು ವಿವಿಧ ಟ್ರಾಪ್ ಗಳನ್ನು ಮಾಡಲಾಗಿದೆ. ಈ ಭೂಗರ್ಭಿತ ಸುರಂಗಗಳ ಮಧ್ಯೆ ಅಡುಗೆಶಾಲೆ, ಭೋಜನಶಾಲೆ ಹಾಗೂ ಸಭಾಗೃಹಗಳನ್ನು ನಿರ್ಮಿಸಿರುವುದು ಆಶ್ಚರ್ಯ! ಒಳ ಹೋಗಿ ನೋಡಿದ ಮೇಲೆ ಭಾರತೀಯ ಎತ್ತರದ ಮನುಷ್ಯರಿಗೂ ಕಷ್ಟವೇ ಆಯಿತು. ಅವಶ್ಯಕತೆಯೇ ಅವಿಷ್ಕರಗಳಿಗೆ ಕಾರಣವೆಂದು 121 km ಉದ್ದದ ಈ ಸುರಂಗಗಳು ಧೃಡೀಕರಿಸಿದೆ. ಸಂಘರ್ಷದ ಸಮಯ ಬಂದಾಗ ಮಾನವ ಸಂಕುಲ ಏನೆಲ್ಲಾ ಮಾಡಲು ತಯಾರಾಗುವುದು ಸೋಜಿಗವೇ ಸರಿ!

**ಮೆಕಾಂಗ್ ಡೆಲ್ಟಾ:** ಇದೂ ಸಹ ದಕ್ಷಿಣ ವಿಯೆಟ್ನಾಂನ ಪ್ರವಾಸಿ ಸ್ಥಳಗಳಲ್ಲಿ ಒಂದಾಗಿದೆ. ಸ್ಥಾನೀಯ ಜನರೊಡನೆ ಸಂಪರ್ಕಿಸಲು ದೋಣಿಯ ಸವಾರಿಯ ಮುಖಾಂತರ ಕರೆದುಕೊಂಡು ಹೋಗಲಾಗುತ್ತದೆ. ಸ್ಥಳೀಯ ಜನರ ಗುಡಿಕೈಗಾರಿಕೆಗಳಾದ ಬೀರ್ ಫ್ಯಾಕ್ಟರಿ, ಚಾಕೋಲೇಟ್ ಫ್ಯಾಕ್ಟರಿ ಮತ್ತು ಕೊಬ್ಬರಿ ಕ್ಯಾಂಡಿಯ ಫ್ಯಾಕ್ಟರಿಗಳನ್ನು ನೋಡಲಾಯಿತು. 'ಅಂಟು ದೋಸೆಯ' ತಿನ್ನುವ ಅವಕಾಶ ಮಾಡಲಾಯಿತಾದರೂ, ನಮ್ಮ ಮೈಸೂರು ದೋಸೆಯೇ ಸರಿ!! ಹೋಗುವ ರಸ್ತೆಯಲ್ಲಿ ಬಿದಿರಿನ ಫೈಬರ್ ಫ್ಯಾಕ್ಟರಿಯನ್ನು ನೋಡಿದೆವು.



**ವಿನ್ಹ್ ಟ್ರಾಂಗ್ ಪಗೋಡ** (Vinh Trang Pagoda) : ತಿಯೆನ್ ಗಿಯಾಂಗ್ (Tien Giang) ಪ್ರಾಂtತ್ಯದ ಪವಿತ್ರ ಸ್ಥಳ. ವಿವಿಧ ರೀತಿಯ ಪಗೋಡಗಳನ್ನು ವಿಯೆಟ್ನಾಂ ನಲ್ಲಿ ಕಾಣಬಹುದು. ಪಗೋಡಗಳ ಎತ್ತರ ಮತ್ತು ವಿನ್ಯಾಸಗಳು ಬೌದ್ಧ ಮುನಿಗಳ

ಜೀವಿತಾವಧಿಯ ಸಾಧನೆಗಳು ಮತ್ತು ಕೊಡುಗೆಗಳನ್ನು ಅವಲಂಬಿಸಿರುತ್ತದೆ. ನಗುಮುಖದ ಬುದ್ಧ ಮತ್ತು ಮಲಗಿರುವ ಬುದ್ಧನ ಮೂರ್ತಿಗಳು ಮನಮೋಹಕವಾಗಿದೆ. ಜಪಾನ್ ಹಾಗೂ ವಿಯೆಟ್ನಾಂನ ಮಿಶ್ರಿತ ಸಂಸ್ಕೃತಿಗಳನ್ನು ಈ ಪಗೋಡದಲ್ಲಿ ಕಾಣಬಹುದು.

**ಬೆನ್ ತಾನ್ಹ್ (Ben Thanh) ಮಾರ್ಕೆಟ್:** ಇದು ನಗರದ ಜನದಟ್ಟಣೆಯ ತಾಣವಾಗಿದೆ. ಸುಮಾರು ಮೂರು ಸಾವಿರ ಅಂಗಡಿಗಳಿಂದ ಆವೃತವಾಗಿದ್ದು ಕಲಸುಮೇಲೋಗರತೆ ಕಾಣಬಹುದು. ಅಂಗಡಿಗಳ ಕಾರುಬಾರು ಮಹಿಳೆಯರಿಂದಲೇ ನಡೆಸುತ್ತಿರುವುದು ನಮ್ಮ ಭಾರತೀಯರಿಗೆ ಆಶ್ಚರ್ಯವೇ ಸರಿ!




**ಉತ್ತರ ವಿಯೆಟ್ನಾಂ:** 'ಸಾಯಿಗಾನ್' ನ 'ತಾನ್ ಸಾನ್ ನ್ಹಟ್' ವಿಮಾನ ನಿಲ್ದಾಣದಿಂದ 'ಹನೋಯಿ'ಯ 'ನೋಯಿ ಬಾಯಿ' ವಿಮಾನ ನಿಲ್ದಾಣಕ್ಕೆ ದೇಶೀಯ ವಿಮಾನದಿಂದ ತಲುಪಿದೆವು. ಸಮಯಾಭಾವ ಇರದೇ ಇದ್ದಲ್ಲಿ ರೈಲು ಪ್ರಯಾಣವೂ ಉತ್ತಮವೇ! ಇಲ್ಲಿ ದಕ್ಷಿಣ ವಿಯೆಟ್ನಾಂಗಿಂತ ಹೆಚ್ಚು ಆಧುನಿಕತೆಯನ್ನು ಕಾಣಬಹುದು. ಮೂರು ರೀತಿಯ ಹವಾಮಾನಗಳಾದ ಬೇಸಿಗೆ, ಮಳೆ, ಚಳಿಗಳನ್ನು ಕಾಣಬಹುದು. ರಸ್ತೆ ಬದಿಯ ತಿನಿಸಿನ ಅಂಗಡಿಗಳಿಂದ ನಗರವು ತುಂಬಿದೆ. ಸಣ್ಣ ಪ್ಲಾಸ್ಟಿಕ್ ಕುರ್ಚಿಗಳ ಮೇಲೆ ಕುಳಿತು ಹೆಂಗಸರು ಗಂಡಸರು ಆಹಾರವನ್ನು ಆಸ್ವಾದಿಸುವುದು ನೋಡಿ ಭಾರತೀಯರಿಗೆ ಸ್ವಲ್ಪ ಇರಿಸು ಮುರಿಸು!! ಇಲ್ಲಿಯೂ ಸಹ ವೈವಿಧ್ಯಮಯ ಪಗೋಡಗಳು, ಐತಿಹಾಸಿಕ ಸ್ಥಳಗಳು ಮತ್ತು ಮಂದಿರಗಳನ್ನು ಕಾಣಬಹುದು.

**ಹೋನ್ ಕೀಮ್ ಸರೋವರ (Hoan Kiem Lake)**: ಇದು ಹನೋಯಿ ನಗರದ ಕೇಂದ್ರಬಿಂದುವಾಗಿದೆ. ಈ ಸರೋವರದ ಸುತ್ತಲೂ ಹರಡಿರುವ ಹಳೆಯ ನಗರವನ್ನು (Old Quarter) ವಿದ್ಯುತ್ ಚಾಲಿತ ವಾಹನದಲ್ಲಿ ಕುಳಿತು ವೀಕ್ಷಿಸಿದೆವು. ಹನೋಯಿ ನಗರದ ಸ್ಥಾಪಕ Ly Thai ನ ಮೂರ್ತಿಯು ಸುಂದರವಾಗಿದೆ.

**ಜಲಾಧಾರಿತ ಸೂತ್ರಬೊಂಬೆಗಳ ಪ್ರದರ್ಶನ (Water Puppett Show)** ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಕಲೆಗಳನ್ನು ವಾಟರ್ ಪಪೆಟ್ಸ್ ಗಳ ಮುಖಾಂತರ ವ್ಯಕ್ತ ಪಡಿಸಿರುವುದು ಆಕರ್ಷಣೀಯ. ಈ ಪ್ರದರ್ಶನವನ್ನು 'ತಾಂಗ್ ಲಾಂಗ್' ಥಿಯೇಟರ್ ನಲ್ಲಿ ಪ್ರದರ್ಶಿಸುತ್ತಾರೆ.




**ಜನಾಂಗಶಾಸ್ತ್ರ ಸಂಗ್ರಹಾಲಯ (Ethnology Museum)** ಸುಮಾರು ೫೪ ಪಂಗಡಗಳ ಸಂಪ್ರದಾಯಗಳನ್ನು ಬಿತ್ತರಿಸುವ ವಿವಿಧ ಮಾದರಿಗಳನ್ನು ಇಲ್ಲಿ ನೋಡಬಹುದು. 'ವಿಯೆಟ್' ಪಂಗಡ ಎಲ್ಲದಕ್ಕಿಂತ ದೊಡ್ಡದು. ವಿಯೆಟ್ನಾಂನ ಅವಿಭಕ್ತ ಕುಟುಂಬಗಳ ಸಂಪ್ರದಾಯಗಳನ್ನು ಮತ್ತು ಜೀವನಶೈಲಿಗಳನ್ನು ತೋರಿಸಲಾಗಿದೆ. ಈ ಮ್ಯೂಸಿಯಂ, ಪಾರಂಪಾರಿಕ ವಿಷಯಗಳ ಬಗ್ಗೆ ಸಂಶೋಧನೆಯ ಕೇಂದ್ರವೂ ಆಗಿರುತ್ತದೆ. ವಿಯೆಟ್ನಾಂನ ಪ್ರಸಿದ್ಧ 'Nang Hat' ತಯಾರಿಕೆಯನ್ನೂ ತೋರಿಸಲಾಗಿದೆ.

**ಥಿಯೇನ್ ಕುಂಗ್ ಗುಹೆಗಳು(Thien Cung Caves)** ಹಲಾಂಗ್ ವಾರ್ಫ್ ನಿಂದ ದೋಣಿಯ ಮುಖಾಂತರ ಸುಮಾರು ೪ ಘಂಟೆಗಳ ಪ್ರಯಾಣ. ಹೋಗುವ ದಾರಿಯಲ್ಲಿ ಮನಮೋಹಕ ದ್ವೀಪಗಳನ್ನು ಕಾಣಬಹುದು. ಕ್ಯಾಲ್ಸಿಯಂನಿಂದ ನೈಸರ್ಗಿಕವಾಗಿ ನಿರ್ಮಿಸಲ್ಪಟ್ಟ ಈ ಗುಹೆಗಳು ಬಹಳ ರೋಮಾಂಚನಕಾರಿ ಹಾಗು ಕುತೂಹಲಕಾರಿ!

**ಹೋಚಿ ಮ್ಹಿನ್ ಕಾಂಪ್ಲೆಕ್ಸ್ (Ho Chi Minh Complex)** ಇಲ್ಲಿ ಹೋಚಿ ಮ್ಯುಸೋಲಿಯಮ್, ಅಧ್ಯಕ್ಷರ ಅರಮನೆ ಮತ್ತು ಪಾರ್ಲಿಮೆಂಟ್ ಕಟ್ಟಡ ನೋಡಿದೆವು. ಇದರ ಸಮೀಪ ಇರುವ 'ಒಂದು ಕಂಭದ ಪಗೋಡ'ವನ್ನು ಸಂದರ್ಶಿಸಿದೆವು.


**ಪಶ್ಚಿಮ ಸರೋವರ ಮತ್ತು ಟ್ರಾನ್ ಕ್ವೋಕ್ ಪಗೋಡ (West Lake & Tran Quoc Pagoda):** ಇದು ನಗರದ ದೊಡ್ಡ ಸರೋವರ. ಸಮೀಪವಿರುವ ಕ್ವೋಕ್ ಪಗೋಡ ಪ್ರಾಚೀನ ಬೌದ್ಧ ಮಂದಿರವಾಗಿದೆ. ಇಲ್ಲಿರುವ ಬೋಧಿವೃಕ್ಷವು ಬಾಬು ರಾಜೇಂದ್ರಪ್ರಸಾದ್ ರವರು ಕೊಟ್ಟ ಸಸಿಯ ಕೊಡುಗೆಯಾಗಿರುವುದು ವಿಶೇಷ

ಸುಮಾರು ದಶಕಗಳ ಕಾಲ ಕದನಗಳಿಂದ ತತ್ತರಿಸಿದ ನಂತರವೂ ಈ ಪುಟ್ಟ ವಿಯೆಟ್ನಾಂ ದೇಶ ಉನ್ನತಿಯ ಕಡೆ ತನ್ನದೇ ಆದ ಸಿದ್ಧಾಂತಗಳ ಮುಖಾಂತರ ದಾಪುಗಾಲು ಹಾಕುತ್ತಿರುವುದು, ದೇಶದ ಪ್ರವಾಸದಿಂದ ಅಂದಾಜು ಸಿಗುತ್ತದೆ!!

# ಸಬ್ ವೇ ಮೂಲಕ

(ಉಮಾ ರಾವ್ ಕಥೆಗಳು)

✍ ಉಮಾ ರಾವ್



ನಾನು ಮುಂಬೈಗೆ ಬರುವವರೆಗೂ ನನಗೆ ಸಬ್ ವೇಗಳ ಪರಿಚಯವೇ ಇರಲಿಲ್ಲ. ಹಾಗೆ ನೋಡಿದರೆ ಮುಂಬೈಗೆ ಬರದೇ ಇದ್ದಿದ್ದರೆ ಸಬ್ ವೇಗಳ ಪರಿಚಯ ಆಗುತ್ತಲೇ ಇರಲಿಲ್ಲವೋ ಏನೋ. ಹೆಚ್ಚಾಗಿ ಅದರ ಬಗ್ಗೆ ತಿಳಿದಿದ್ದು ಇಂಗ್ಲಿಷ್ ಪುಸ್ತಕಗಳನ್ನು ಓದಿ ಹಾಗೂ ಇಂಗ್ಲೀಷ್ ಚಲನಚಿತ್ರಗಳನ್ನು ನೋಡಿ. ಆದರೂ ಅದರಲ್ಲೆಲ್ಲ ನಾನು ಕಂಡಂತೆ ಕೊಲೆ, ಕಳ್ಳತನ, ಹೊಡೆದಾಟಗಳನ್ನು ಮಾತ್ರ ಸಬ್ ವೇಗಳಲ್ಲಿ ತೋರಿಸುತ್ತಾರೆ. ಒಂದು ಪ್ರಣಯ ಪ್ರಸಂಗ, ಮಗುವಿನ ಹುಟ್ಟು ವರ್ಷಗಳ ನಂತರ ಆಪ್ತ ಗೆಳೆಯರ ಭೇಟಿಯಲ್ಲಿ ಆಗುವುದೇ ಇಲ್ಲವೇ? ಆದ್ದರಿಂದಲೇ ಸಬ್ ವೇ ಹೊಕ್ಕಾಗ ನನಗಾಗುವ ತಳಮಳಕ್ಕೆ ಕಾರಣ ನನ್ನ ಮನದಾಳದಲ್ಲಿ ಅಡಗಿ ಕೂತಿರುವ ಈ ಚಿತ್ರಗಳೇ ಏನೋ. ಇಂದು ಎಂದಿನಂತೆ ಆಯ್ತು. ಸಬ್ ವೇಯಲ್ಲಿ ಕಾಲಿಡುವ ಮುನ್ನ ರಸ್ತೆಯ ಮೇಲೆ ನಡೆಯುತ್ತಾ ಅತ್ತ ಹೋಗುವ ಉತ್ಕಟ ಬಯಕೆಯಾಯಿತು. ಅಲ್ಲಿಯೇ ಒಂದು ಕ್ಷಣ ನಿಂತು ಅನುಮಾನಿಸಿದೆ. ಆಗ ಎದುರಿಗೆ ಸಬ್ ವೆ ಉಪಯೋಗಿಸಿ "ರಕ್ಷಕನಿದ್ದಾನೆ" ಎಂಬ ಫಲಕ ಕಣ್ಣು ಕುಕ್ಕಿತು. ರಕ್ಷಕನಿದ್ದಾನೆ ರಕ್ಷಕ ಬೇಕೇ ಬೇಕೇ ಇಲ್ಲಿ? ಇದೇ ನನ್ನ ಭಯದ ಮೂಲವೇ? ಈ ಫಲಕ ಪೇಂಟಿಂಗ್ ಮಾಡಿದವನಿಗೆ ಈ ಅನುಭವದ ವೈಚಿತ್ರ ಖಂಡಿತ ಇರಲಾರದು. ಇಲ್ಲದಿದ್ದರೆ ಒಂದಕ್ಷರವು ಚೂರು ಕೊಂಕಾಗದಂತೆ ಹೀಗೆ ಬರೆಯಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಪಕ್ಕದಲ್ಲಿ ನೂರಾರು ಜನ ಅವಸರವಾಗಿ ಸಬ್ ವೆ ಪ್ರವೇಶಿಸುತ್ತಿರುವುದು ಕಾಣಿಸಿತು. ನಾನು ಮಾತ್ರ ಹೆದರಿಪುಕ್ಕ ನಂತೆ ರಸ್ತೆಯಲ್ಲಿ ವಾಹನಗಳಿಂದ ತಪ್ಪಿಸಿಕೊಳ್ಳುತ್ತಾ ಏಕೆ ಓಡಬೇಕು? ಇದನೊಂದು ಚಾಲೆಂಜ್ ಎಂದು ಏಕೆ ಪರಿಗಣಿಸಬಾರದು? ಏನಾಗಬಹುದು ಹೆಚ್ಚೆಂದರೆ ಸಬ್ ವೆ ಕುಸಿದು ಅಲ್ಲೇ ಭೂಗತವಾಗಬಹುದು. ಓಡಿ ಹೋಗಲು ಸಮಯವಿರುವುದಿಲ್ಲ. ಹಾಗೆ ಒಂದು ಕ್ಷಣದಲ್ಲಿ ಸಬ್ವೇ ಕುಸಿಯುವುದು ಭೂಕಂಪ, ಬಾಂಬ್ ಸ್ಫೋಟಗಳಿಂದ ಮಾತ್ರ ಸಾಧ್ಯ. ಆದರೆ ಇತ್ತೀಚೆಗೆ ಬಾಂಬ್ಸ್ ಸ್ಫೋಟವೂ ಸಾಧಾರಣವಾಗಿ ಹೋಗಿದೆ. ಯಾರಾದರೂ ಆತಂಕವಾದಿಗಳು ಇಲ್ಲಿ ಬಾಂಬು ಇಟ್ಟಿದ್ದರೆ? ಆದರೆ ಆ ಬಾಂಬು ನಾನು ದಿನ ಪ್ರಯಾಣ ಮಾಡುವ ಲೋಕಲ್‌ನ ಫಸ್ಟ್ ಕ್ಲಾಸ್ ಡಬ್ಬಿಯಲ್ಲಿಯೇ ಇರಬಹುದು. ಅಥವಾ ಸಂಜೆ ಕಡಲೆಕಾಯಿ ಮೆಲ್ಲುತ್ತಾ ಹಾದು ಹೋಗುವ ಆಕಾಶವಾಣಿ ಕಟ್ಟಡದ ಪೋರ್ಟಿಕೋದಲ್ಲಿ.... ಆಗ ಪಕ್ಕದಲ್ಲಿ ಹಾದು ಹೋಗುತ್ತಿರುವವನೊಬ್ಬ ನನಗೆ ಡಿಕ್ಕಿ ಹೊಡೆದ. ನಾನು ಬೆಚ್ಚಿ ಸಮತೋಲ ತಪ್ಪಿ ಲಚ್ಚಗುಟ್ಟುತ್ತಾ ಅವನನ್ನು ದುರುಗುಟ್ಟಿ ನೋಡಿದೆ. ಅವನು ನಿಂತು ಬೆಳಗಿದ್ದು ನಿನಗೆ ಬೇರೆ ಏನು ದಂದೆ ಸಿಕ್ಕಲಿಲ್ಲವೇ? ಮಾಡೋಕೆ ಕೆಲಸವಿಲ್ಲದಿದ್ದರೆ ಹೋಗಿ ಪಾರ್ಕಿನಲ್ಲಿ ಕೂತ್ಕೋ. ಹೀಗೆ ಹೋಗುವವರಿಗೆ ಅಡ್ಡ ನಿಂತು ತೊಂದರೆ ಮಾಡಬೇಡ ಎಂದ. ಸುತ್ತಮುತ್ತಲಿನ ಬೇರೆ ಎಲ್ಲರೂ ನನ್ನಂತ ದೂಷಿಸುವ ದೃಷ್ಟಿ ಬೀರಿ ತುಂಬಾ ಮಹತ್ವದ ಕೆಲಸಕ್ಕಾಗಿ ಹೋಗುತ್ತಿರುವಾಗ ಗಂಭೀರ ಮುದ್ರೆ ಹೊತ್ತು ತಮ್ಮ ಬ್ರೀಫ್ ಕೇಸುಗಳಿಗೆ ಅಂಟಿಕೊಂಡು ಮುಂದೆ ಸಾಗಿದರು. ಆ ಕ್ಷಣ ಇಂದು ಯೋಚಿಸದೆ ರಸ್ತೆ ದಾಟುವ ಯೋಚನೆ ಬಿಟ್ಟು ಸಬ್ ವೇ ಪ್ರವೇಶಿಸಿದೆ. ಏನೋ ಒಂದು ಆತಂಕ ನನ್ನನ್ನು ಹಿಡಿಯಿತು. ಹೊಟ್ಟೆಯಲ್ಲಿ ಗಂಟಾಯ್ತು. ಹಣೆಯ ಮೇಲೆ ಮೂಡಿದ ಬೆವರ ಹನಿಗಳನ್ನು ನಿಧಾನವಾಗಿ ಕರ್ಚಿಫ್ ತೆಗೆದು ಒರೆಸುತ್ತಾ, ಒಣಗಿದ ತುಟಿಗಳ ಮೇಲೆ ನಾಲಿಗೆ ಸವರಿಕೊಳ್ಳುತ್ತಾ, ನನ್ನ ಸುತ್ತಮುತ್ತಲಿನವರನ್ನು ನೋಡಿದೆ. ಅವರೆಲ್ಲ ನನ್ನತ್ತ ಗಮನಕೊಡದೆ ತಮ್ಮ ಪಾಡಿಗೆ ತಾವು ಹೋಗುತ್ತಿರುವುದು ಕಂಡಿತು. ಮೆಟ್ಟಿಲುಗಳನ್ನು ಇಳಿಯತೊಡಗಿದೆ. ಒಂದು ಎರಡು ಮೂರು ನಾಲ್ಕು ಐದು...

"ಸಾಬ್" ಪಕ್ಕದಲ್ಲಿ ಪುಟ್ಟ ಬರಿ ಮೈ ಹುಡುಗನೊಬ್ಬ ನನ್ನ ಪ್ಯಾಂಟು ಜಗ್ಗಿದ. "ಸಾಬ್" ಎಂದೂ ಯಾರಿಗೂ ಭಿಕ್ಷೆ ಕೊಡದ ನಾನು ಅವನನ್ನು ಸಾಗಿ ಹಾಕಿದರೆ ಸಾಕು ಎಂದುಕೊಳ್ಳುತ್ತಾ ಜೆಬಿ ನಲ್ಲಿ ಗಬರಾಡಿ 10 ಪೈಸಾ ತೆಗೆದು ಅವನಿಗೆ ಕೊಟ್ಟೆ. ಅಷ್ಟು ಹೊತ್ತಿಗೆ ಮೆಟ್ಟಿಲು ಮುಗಿದು ನೆಲ ಕಂಡಿತು. ಪಕ್ಕದಲ್ಲಿ ಹಾಗೆ ಕಣ್ಣು ಹಾಯಿಸಿದರೆ ಗೋಡೆಯ ತುಂಬಾ ಪಾನಿನ ಕೆಂಪು ಕಲೆಗಳು ರಕ್ತದಂತೆ. ಅವು ಹಾಗೆ ದೊಡ್ಡದಾಗುತ್ತಾ ನನ್ನನ್ನು ದಿಟ್ಟಿಸುತ್ತಿರುವಂತೆ ಭಾಸವಾಯಿತು. ಚಿತ್ರ ವಿಚಿತ್ರ ಆಕಾರಗಳಾಗಿ ಮೂಡಿಬಂದಿತು. ಎಂದಿನಂತೆ ಉದ್ದಕ್ಕೂ ತರಹದ ಮಾರಾಟಗಾರರು ನಿಂತಿದ್ದರು, ಕೂತಿದ್ದರು. ಮೊದಲಿಗೆ ಕೆಂಪು ಹೂವಿನ ಶರ್ಟು ನೀಲಿ ಜೀನ್ಸ್ ಧಾರಿ. ಅವನ ಸೊಂಟ ಪಟ್ಟಿಯ ಹಿತ್ತಾಳೆ ಬಕ್ಕಲ್ ಮೇಲೆ ಹಾವಿನ ಆಕಾರದ ಪಿನ್ ಹೊಳೆಯುತ್ತಿತ್ತು. ಇವನ ಹೆಸರು ಸಲೀಂ, ಶೇಖರ್ ಸಲ್ದಾನ, ಸರ್ಜಾ ಸೂರಜ್ ಏನೆಲ್ಲ ಇರಬಹುದು ಅಥವಾ ಇವನು ಪ್ರೀತಿಸುವ ಹುಡುಗಿ ಸಲ್ಮಾ, ಸಾರಾ, ಸಂಗೀತ ಏನಾದರೂ ಇರಬಹುದೇ? ನಾನು ನಿಧಾನವಾದದ್ದು ನೋಡಿ ಅವನ ಕೈ ತುಂಬಾ ಇರುವ ಬೆಲ್ಟುಗಳ ಗೊಂಚಲನ್ನು ನನ್ನ ಮುಂದೆ ಹಿಡಿದ. "ಲೆದರ್ ಬೋಲೋ ಜೀನ್ಸ್ ಬೋಲೋ ಪ್ಲಾಸ್ಟಿಕ್ ಬೋಲೋ..... ಬೋಲೋ ಸಾಬ್..." ನನಗರಿವಿಲ್ಲದಂತೆ ಒಂದು ಕ್ಷಣ ಅವುಗಳತ್ತ ದಿಟ್ಟಿಸಿದೆ. ಅವನ ಮುಖ ನೋಡಿದೆ. ಗುಂಗುರು ಕೂದಲಿನ ಉದ್ದನೆಯ ಕ್ರಾಪು. ಕಿವಿಯ ಹಿಂದಿನಿಂದ ಇಣುಕುವ ಸುರುಳಿ ಸುರುಳಿ ಕೂದಲು. ಕಣ್ಣಲ್ಲಿ ಕೊಂಚ ಸುರುಮಾ. ಒಂದು ಕಿವಿಗೆ ರಿಂಗ್. ಇವನೇನಾದರೂ.....ನಾಗೇಶ್ ಹೇಳುತ್ತಿದ್ದನಲ್ಲ ಅಂತವರೆಲ್ಲ ಒಂದೇ ಕಿವಿಗೆ ರಿಂಗ್ ಹಾಕಿಕೊಳ್ಳುತ್ತಾರೆ ಅಂತ, ಆದರೆ ಯಾವ ಕಿವಿ? ಎಡಗಿವಿಯೋ , ಬಲಗಿವಿಯೋ? "ಬೋಲೋ ಸಾಬ್" ಎಂದು ನಕ್ಕು ಅವನು ಸೊಂಟ ಕುಲುಕಿಸಿದ. ಒಂದು ಸಲ ಸಬ್ ವೆ ದ್ವಾರದಂತ ಕಣ್ಣು ಹಾಯಿಸಿದ. ಇವನಿಗೂ ಹಾಗಾದರೆ ಅದೇ ಭಯವೇನು? ಆದರೆ ಅವನೇಕೆ ಇಲ್ಲಿ ವ್ಯಾಪಾರ ಮಾಡಬೇಕು? ಹೊರಗೂ ಇದೇ ಮಾಡಬಹುದಲ್ಲ. "ನೀನು ಇಲ್ಲೇ ಏಕೆ ವ್ಯಾಪಾರ ಮಾಡುತ್ತೀಯಾ?" ನನ್ನ ಪ್ರಶ್ನೆ ಕೇಳಿ ಅಚ್ಚರಿಯಿಂದ ಅವನು ನನ್ನತ್ತು ನೋಡಿದ. ಮರುಕ್ಷಣವೇ ಏನು ಅರ್ಥ ಮಾಡಿಕೊಂಡಂತೆ ನಮ್ಮ ದಂಧೆಗೆ ಇಲ್ಲೆ ಸರಿ ಸಾಬ್" ಎಂದ. ಕಣ್ಣು ಹೊಡೆದ. ನಾನು ಅವನನ್ನು ಹಾಗೆ ಬಿಟ್ಟು ಮುಂದೆ ಹೆಜ್ಜೆ ಹಾಕಿದೆ.

ಪಕ್ಕದಿಂದ ಅಲಂಕಾರ ಮಾಡಿಕೊಂಡ ಕೋತಿಯೊಂದು ಬಂದು ಸಲಾಮ್ ಹಾಕಿತು. ಕತ್ತಿನಲ್ಲಿ ಗೆಜ್ಜೆ, ಗುಲಾಬಿ ಹೂವಿನ ಅಂಗಿ. ಅದಕ್ಕೇ ಸೇರಿಸಿದ, ಒಡೆಯ ಹಿಡಿಯ ದಾರ. ಹಣೆಯಲ್ಲಿ ಕುಂಕುಮ. ಅದು ಒಂದರ ಮೇಲೊಂದು ಪಲ್ಟಿ ಹಾಕಿದಂತೆ, ಅದನ್ನು ಕಂಡು ತುಂಬಾ ಅಸೂಯೆಯಾಯಿತು. ಇದಕ್ಕೇ ಸಬ್ ವೇ ಭಯದ ಪರಿಚಯವೇ ಇರಲಾರದೆಂದು. ಮತ್ತೊಮ್ಮೆ ಹೊಟ್ಟೆ ತಿರುಗಿಸಿದಂತಾಗಿ ಸುತ್ತಮುತ್ತ ನೋಡಿದೆ. ನನ್ನ ಪಕ್ಕದಲ್ಲೇ ಯುವ ಪ್ರೇಮಿಗಳು ಕೈ ಹಿಡಿದು ಮೈಮರೆತು ನಡೆಯುತ್ತಿದ್ದರು. ಇವರಿಗೆ ತಾವು ಸಬ್ ವೇಯಲ್ಲಿದ್ದೇವೆ ಎನ್ನುವ ಪರಿವೆಯೇ ಇಲ್ಲವೇನು ಅಥವಾ ಇರುವುದರಿಂದಲೇ ಕೈ ಹಿಡಿದಿದ್ದಾರೋ, ಅವರು ನನಗಿಂತ ಮುಂದಿದ್ದು ಬೆನ್ನು ಮಾತ್ರ ಕಾಣಿಸುತಿದ್ದಿದ್ದರಿಂದ ಏನೂ ಗೊತ್ತಾಗಲಿಲ್ಲ. ಆಗಲೇ ರಿಬ್ಬನ್, ಬಳೆ, ಪಿನ್ನು,

ಬಿಂದಿ, ಕರಿದಾರ, ಪುಟ್ಟ ಪುಟ್ಟ ಸಾಯಿಬಾಬ ಪದಕಗಳನ್ನು ತುಂಬಿದ ಟ್ರೇ ಕತ್ತಿಗೆ ಹಾಕಿಕೊಂಡು ನಿಂತ ಕಪ್ಪು ತಮಿಳು ಹುಡುಗಿ ಸಮೀಪಿಸಿದಳು. ತಮಿಳಿನ ಛಾಯೆಯಲ್ಲೇ ಹಿಂದಿ ಮಾತಾಡುವ ಹುಡುಗಿ "ಮೇಮ್ ಸಾಬ್ ಗೋಸ್ಕರ ತಗೊಳ್ಳಿ" ಎನ್ನುತ್ತಾ ಮೊನ್ನೆ ಯಾವುದೋ ಚಿತ್ರದಲ್ಲಿ ಜಯಪ್ರದಾ ಧರಿಸಿದ ತರಹದ ಅಂಟು ಕುಂಕುಮ ಮುದೆ ಹಿಡಿದಳು.
ಅವಳಿಂದ ತಪ್ಪಿಸಿಕೊಂದು ಹೋದರೆ ಕೈ ನೋಡುವ ಬಾಬಾ.... ದೊಡ ಕೈಯಿನ ರೇಖಾಚಿತ್ರ ಬಿಡಿಸಿ ಕೂತವ - "ಹೇಳು ಸಾಬ್" ಎಂದ. ಕೈಗಳನ್ನು ಮೇಲೆತ್ತಿ ಕಣ್ಮುಚ್ಚಿ ಕೈ ಮುಗಿದ. ಅರೆ.... ಏನೋ ಶಬ್ದ. ಭರ್ರ್ರೋ ಎಂದು, ಏನಿರಬಹುದು. ನನ್ನ ಭ್ರಮೆಯೋ ಟ್ರಕ್ಕೋ. ನನ್ನ ದೃಷ್ಟಿ ಬಾಗಿಲ ಹತ್ತಿರ ಹರಿದಾಗ, ಮೆಟ್ಟಿಲು ಮೇಲೆ ಕುಳಿತು ಕಂದನಿಗೆ ಹಾಲೂಡಿಸುತ್ತಿರುವ ಭಿಕ್ಷುಕಿ ಕಂಡು ಬಂದಳು. ಎಷ್ಟು ಲಕ್ಷಣವಾಗಿದ್ದಾಳೆ. ಈ ಹರಕಾ ಬಟ್ಟೆಯಲ್ಲಿ ಕೂಡ. ಎಲ್ಲೋ ಮೇಲೆ ನೋಡುತ್ತಿದ್ದ್ವಳು ಅನ್ಯಮನಸ್ಕಳಾಗಿ. ಏನಾದರೂ ಗಂಡಾಂತರ ಉಂಟಾಗಿ ಸಬ್ ವೇ ಕುಸಿದರೆ ಎಷ್ಟು ಒಳ್ಳೆಯದೆಂದು ಯೋಚಿಸುತ್ತಿರಬಹುದೇ. ಅಥವಾ ಮಗುವಿನ ತಂದೆ ಯಾರಿರಬಹುದೆಂದು. ಅವನು ಈಗ ಏನು ಮಾಡುತ್ತಿರಬಹುದೆಂದು. ಮುಂದೊಂದು ದಿನ ಇದೇ ಮಗು ಅವನ ಮುಂದೆ ಭಿಕ್ಷೆ ಬೇಡುತ್ತ ತೆಗಳಿದಾಗ ಅವನಿಗೇನಾದರೂ ಅನ್ನಿಸಬಹುದೇ ಎಂದು. "ಸಾಬ್ ಬೋಲ್..." ಮತ್ತೊಮ್ಮೆ ಬಾಬಾ ಕೇಳಿದ. "ಏನು ಹೇಳಲಿ... ಮದುವೆ, ಕೆಲಸ, ಲಾಟರಿ, ಆರೋಗ್ಯ, ಪ್ರಮೋಶ್ಃಅನ್, ಪ್ರವಾಸ, ಆಸ್ತಿಪಾಸ್ತಿ...." ಇವನಿಗೆ ಕೈ ತೋರಿಸಿದರೆ ಹೇಗೆ? ಏನು ಕೇಳುವುದು? ಸುಶ್ಮಾಬಗ್ಗೆ ಕೇಳಿದರೆ? ಅವಳ ಯೋಚನೆ ಬಂದಂತೆ ಹಳೆಯ ನೋವೆಲ್ಲಾ ಭೋರ್ಗರೆಯುತ್ತಾ ನುಗ್ಗಿ ಬಂದಿತು. ಛಿ. ಈಗ ಕೇಳಿ ಏನು ಪ್ರಯೋಜನ... ಆದದ್ದು ಆಗಿ ಹೋಯಿತು. ಆದರೆ, ಅದರಲ್ಲಿ ಸುಶ್ಮಾಳ ತಪ್ಪೂ ಇತ್ತು... ಅಪರಾಧ ಬರಿಯ ನನ್ನದಲ್ಲ. ಮತ್ತೆ ಮತ್ತೆ ಅದೇ ಯೋಚಿಸಿ ಏನು ಉಪಯೋಗ. ಅರೆ, ನಾನೇಕೆ ತಡ ಮಾಡುತ್ತಿದ್ದೇನೆ. ಆದಷ್ಟು ಬೇಗ ಇಲ್ಲಿಂದ ಬಚಾವಾಗಬೇಕು. ನನಗೇನಾದರೂ ನನಗೇ ತಿಳಿಯದಂತೆ ಸಾಯುವ ಆಸೆ ಇರಬಹುದೇ?
ಹಾಗೇ ಕಾಲು ಹಾಕಿದಂತೆ ಎದುರು ಸಾಲಿನಲ್ಲಿ ಲಾಟರಿ ಟಿಕೆಟ್ ಮಾರುವ ಕುರುಡ ಕಂಡು ಬಂದ. ಅವನ ಮುಖದ ಮೇಲೆ ವಿಚಿತ್ರ ನಗೆ. ಶುಭ್ರ ನೀಲಿ ಆಕಾಶದ ಕೆಳಗೆ ನಿಂತಾಗ ಇರುವಂತೆಯೇ ಇಲ್ಲೂ. ಇವನೊಬ್ಬ ಮಾತ್ರ ಈ ಭಯಕ್ಕೆ ಹೊರತೋ, ಹಾಗಾದರೆ ಕಣ್ಣಿಗೆ ಕಾಣದ ವಿಷಯಗಳು ಆತಂಕವನ್ನೇ ಹುಟ್ಟುಸುವುದಿಲ್ಲವೇ.... ಅದು ಹೇಗೆ ಸಾಧ್ಯ... ಅದನ್ನು ಮೀರಿದ ಯಾವುದೋ ಒಂದು ಅಮೂರ್ತ ಅರಿವಿದ್ದೇ ಇರುತ್ತಲ್ಲವೇ. ಬರಿಯ ಒಳಮನಕ್ಕೆ ತಿಳಿಯುವಂಥಾದ್ದು. ಅಥ್ವಾ ಈ ನನ್ನ ಬಹ್ಯ ಅಷ್ಟು ನಿಷ್ಕಾರಣವೇ.... ಇದು ಬರಿಯ ಕಣ್ಣಿಗೆ ಕಾಣುವುದರಿಂದ ಮಾತ್ರ ಉಂಟಾದ ಭಯವೇ.... ಈ ಕ್ಷಣ ಆ ಪ್ರೇಮಿಗಳು ಏನೋ ಚೌಕಾಶಿ ಮಾಡುತ್ತಿದ್ದರು. ಹುಡುಗ ಹುಡುಗಿಯ ಕಿವಿಯಲ್ಲಿ ಪಿಸುಗುಟ್ಟುತ್ತಿದ್ದ. ಹುಡುಗು ಕೆಂಪಾಗಿ ನಗುತ್ತಿದ್ದಳು. ಕೋತಿ ಪಾರ್ಸಿ ಮುದುಕನೊಬ್ಬನಿಗೆ ಸಲಾಮು ಹಾಕುತ್ತಿತ್ತು. ರಿಬ್ಬನ್, ಬಳೆ, ಪಿನ್ನು ಮಾರುವ ಹುಡುಗಿ ತಮಿಳು ಹಿಂದಿಯಲ್ಲಿ ಕೂಗುತ್ತಲೇ ಇದ್ದಳು. ಇವರಿಗೆಲ್ಲಾ ಸಬ್ ವೇ ಭಯ ತಟ್ಟಿಯೇ ಇಲ್ಲವೇ, ಇದ್ದಿದ್ದರೆ ಇಷ್ಟು ನಿರಂಬಳವಾಗಿ ಹೇಗಿರುತ್ತಿದ್ದರು? ಅಥವಾ ಈ ಭಯವನ್ನು ಮೀರಲೆಂದೇ ಇಷ್ಟು ಗೆಲುವಾಗಿ ಕಾನುತ್ತಿದ್ದಾರೆಯೇ? ಇರಬೇಕಾದ್ದಕ್ಕಿಂತ ಹೆಚ್ಚು ಗೆಲುವಾಗಿ? "ಎಷ್ಟು ಟಿಕೆಟ್ ಸಾಬ್" ಎಂದ ಆ ಕುರುಡ. ನಾನು ನಿಂತಿರುವುದನ್ನು ಗ್ರಹಿಸಿ. ಅವನ ಕಣ್ಣುಗಳತ್ತ ನೋಡಿದಾಗ ಏನೋ ವಿಚಿತ್ರ ಕಸಿವಿಸಿಯಾಯಿತು. ಈ ಜಗತ್ತಿನಲ್ಲಿ ಕೇವಲ ನಾನು, ಅವನು  ಈ ಸಬ್ ವೇಯಲ್ಲಿ ನಿಂತಿಉರ್ವಂತೆ ಹಾಗೇ ನೋಡುನೋಡುತ್ತಿದ್ದಂತೆ ಸುತ್ತೆಲ್ಲಾ ಜನರು ಬರಿಯ ಹಾವಭಾವಗಳಾದರು. ದಟ್ಟ ಬಣ್ಣಗಳಾದರು. ಅವರ ಕೂಗಾಟ, ಮಾತು ಬೆರೆತು ಬರಿಯ ಕಲರವವಾಗತೊಡಗಿತು. ಹಾಂ, ಆಗ ಕೇಳಿಬಂದಿತು ಎಲ್ಲಿಂದಲೋ ಒಂದೇ ಸಮನೆ ಕೂಗಾಟ. ಸ್ವಲ್ಪ ಸ್ವಲ್ಪವಾಗಿ ಹತ್ತಿರವಾಗುತ್ತಾ... ಜೋರಾಗುತ್ತಾ...."ಪಪಪಪಪ ಜಿಂದಾಬಾದ್, ಟಟಟಟ ಮುರ್ಧಾಭಾದ್, ಪಪಪಪ ಜಿಂದಾಬಾ, ಟಟಟಟ ಮುರ್ಧಾಬಾದ್. ಮೋರ್ಚಾ... ಸಾವಿರಾರು ಜನರ ಕೂಗು... ಹೆಜ್ಜೆ ಶಬ್ದ,,,, ಏನಿದು. ಅದನ್ನು ಕೇಲುತ್ತಾ, ಅದು ಹತ್ತಿರವಾಗುತ್ತಾ ಬಂದಂತೆ ನನ್ನ ಭೀತಿ ಹೆಚ್ಚಾಗುತ್ತಾ ಹೋಯಿತು. ಕಣ್ಣು ಕತ್ತಲಿಡತೊಡಗಿತು. ಹಾಗೇ ತಲೆ ತುಂಬ ಚೀರಾತ, ಗದ್ದಲ ಆವರಿಸುತ್ತಾ ದೊಡ್ಡದಾಗುತ್ತಾ ಹೋಯಿತು. ಆಗ ಸಬ್ ವೇ ದ್ವಾರದಿಂದ ನೆರಳುಗಳು ನುಗ್ಗಿ ಬಂದು ಕತ್ತಲು ಕತ್ತಲಾಗತೊಡಗಿತು. ಹೌದು, ನೂರಾರು ಜನ ನುಗ್ಗಿ ಬರುತ್ತಿದ್ದರು. ದಿಕ್ಕೆಟ್ಟು... ಕೈಯಲ್ಲಿ ಧ್ವಜ ಹಿಡಿದವರು, ಕೋಲು ಹಿಡಿದವರು, ಜೇಬಿಗೆ ಬ್ಯಾಜ್ ಹಾಕಿಕೊಂಡವರು. ಸಬ್ ವೇ ತುಂಬತೊಡಗಿದರು. ಸಾವಿರಾರು ಜನ. ಏನು ಮಾಡಲೂ ತೋಚದೆ ಮಾರಾಟಗಾರರೆಲ್ಲ ತಮ್ಮ ಸರಕುಗಳನ್ನು ಗಂತು ಕಟ್ಟಿಕೊಂಡು ನಿಂತುಕೊಂಡರು. ಕೋತಿ ಆಡಿಸುವವ ಅದನ್ನು ಭುಜದ ಮೇಲೆ ಕೂಡಿಸಿಕೊಂಡು ನಿಂತ. ನನಗೆ ಕೈಕಾಲು ಉಡುಗಿ ಹೋದಂತಾಗಿ ಅಲ್ಲೇ ಹೆಪ್ಪುಗಟ್ಟಿದೆ. ಏನಿದೆಲ್ಲಾ... ಹಾಗಾದರೆ, ನನ್ನ ಬಯ ನಿಜಯಾಯಿತೇ>! ನನ್ನ ಪಕ್ಕದಲ್ಲಿದ್ದವನನ್ನು ಕೇಳಿದೆ... "ಏನಾಗುತ್ತಿದ್ದೆ.. ನೀವೆಲ್ಲಾ ಹೀಗೇಕೆ ಇಲ್ಲಿಗೆ ಓಡಿ ಬರುತ್ತಿದ್ದೀರಿ?" ಅವನು ರೋಷದಿಂದ ಹಲ್ಲು ಕಡಿದ. "ಹಾಳಾದ ಗಾಂಡುಗಳು... ನಾವು ನಮ್ಮ ಪಾಡಿಗೆ ಮೋರ್ಚಾ ತೆಗೆದುಕೊಂಡು ಹೋಗುತ್ತಿದ್ದೆವು. ಸಾಲಾ, ಪೋಲೀಸಿನವರು ಲಾಠಿ ಚಾರ್ಜ್ ಶುರು ಮಾಡಿದರು ಇದ್ದಕ್ಕಿದ್ದಂತೇ... ಏನೂ ಹೊಡೀತಾರೆ. ಇವನ, ನಮ್ಮ ಗಣಪತ್ ತಲೆ ಒಡೆದು ರಕ್ತ ಸುರೀತಾ ಇದೆ....ಇವರಿಗೆ ಬಾಲ್ ಬಚ್ಚಾ ಇಲ್ವಾ?" ಎನ್ನುತ್ತಾ ಬೈಗುಳ ಕೊಡುತ್ತಲೇ ಇದ್ದ. ಹಾಗಾದರೆ ನನ್ನ ಗತಿ?
ಸಬ್ ವೇ ಒಂದೇ ಸಮನೆ ತುಂಬುತ್ತಲೇ ಇತ್ತು. ಆಫೀಸ್ ರಶ್ ಸಮಯದಲ್ಲಿ ಕಿಕ್ಕಿರಿದಿರುವ ಲೋಕಲ್ ಸೆಕೆಂಡ್ ಕ್ಲಾಸ್ ಡಬ್ಬಿಯಂತೆ. ಇನ್ನು ಸಾಧ್ಯವಿಲ್ಲವೆನಿಸಿತು. ಹೊಟ್ಟೆ ತೊಳೆಸತೊಡಗಿತು. ಮೈ ಒತ್ತಿಕೊಂಡು ಉಸಿರಾಡಲೂ ಕಷ್ಟವಾಯಿತು. ಜನರ ಕೂಗು, ಬೆವರಿನ ವಾಸನೆ... ತಂಬಾಕು ನಾತ.. ಸಿಗರೇಟಿನ ಹೊಗೆ..  ಎಲ್ಲಾ ಸೇರಿ ಏನೇನೂ ಆಗತೊಡಗಿತು. ಏನು ಮಾಡಲೂ ತಿಳಿಯಲಿಲ್ಲ. ಭಯವಾದಾಗ ಇಲ್ಲಿ ಬರದೆ ರಸ್ತೆಯಲ್ಲಿ ನಡೆಉ ಹೋಗಿದ್ದರೆ, ಮೂರ್ಖ... ಚಾಲೆಂಜ್ ಎಂದುಕೊಂಡೆನಲ್ಲಾ... ಇದೆಂಥಾ ಚ್ಯಾಲೆಂಜ್ ಹಿಂದೊಮ್ಮೆ ತಿರುಪತಿಯಲ್ಲಿ ಕ್ಯೂ ನಿಂತವರು ಜಾಲಿಯ ಮಧ್ಯದಲ್ಲಿ ಸ್ಟಾಂಪೀಡ್ ಆಗಿ ಎಷ್ಟು ಜನ ಸತ್ತಿದ್ದರು. ಇವತ್ತು ಇಲ್ಲೂ ಹಾಗೇ, ಎದುರಿನವರ ಮೊಣಕ್ಕೆ ಜೋರಾಗಿ ಹೊಟ್ಟೆಗೆ ತಿವಿಯುತ್ತಿತ್ತು. ಇನ್ನೇನು ವಾಂತಿಯಾದೀತು ಎನ್ನಿಸಿತು. ನನ್ನ ಕೂಗನ್ನು ಕೇಳುವವರೇ ಇರಲಿಲ್ಲ. ಎಲ್ಲಾ ಕೂಗುವವರೇ, ಕೇಳುವವರಾರು. ಬರುತ್ತಲೇ ಇದ್ದರು. ಇನ್ನಷ್ಟು ಮತ್ತಷ್ಟು ಜನ. ಇಂದು ಇಲ್ಲೇ ನನ್ನ ಸಮಾಧಿ. ಅಕಸ್ಮಾತ್ ಬದುಕುಳಿದರೆ ಇನ್ನೆಂದೂ ಸಬ್ ವೇಯಲ್ಲಿ ಕಾಲಿಡುವುದಿಲ್ಲ. ನಾವು ಬದುಕುತ್ತಲೇ ಹೋಗುತ್ತೇವೆಂದುಕೊಂಡು ಏನೇನೆಲ್ಲಾ ಮಾಡುತ್ತೇವೆ. ಸುಶ್ಮಾ.... ಅವಳಿಗೆ ಕಾಗದ ಬರೆಯದೆ ಎಷ್ಟು ಸತಾಯಿಸಿದೆ. ಇಂದು ಸಾಧಿಸಿದ್ದೇನು... ಅದರ ಬದಲು ಹೃತ್ಪೂರ್ವಕವಾಗಿ ಸುಶ್ಮಾಳನ್ನು ತಬ್ಬಿಕೊಂಡಿದ್ದರೆ ಆಗ ನಾನಿಂದು ಇಲ್ಲಿ ಇರುತ್ತಲೇ ಇರಲಿಲ್ಲವೇನೋ.... ಎಷ್ಟು ವಿಚಿತ್ರ ಅಮ್ಮ... ಅಮ್ಮನಿಗೆ ಇದು ತಿಳಿದರೆ,

ಅವಳನ್ನು ನೋಡಿಕೊಳ್ಳುವವರಾರು... ಮಾತು ಮಾತಿಗೂ ಹಮ್ಮಿಸುತ್ತಿದ್ದೆನೆಲ್ಲಾ. ನಾನಿರುವುದರಿಂದ ನಿನಗೆ ಯೋಚನೆ ಇಲ್ಲಾಂತ. ಏನೇನೆಲ್ಲಾ ಅಂದಿದ್ದೆ. ನಾನಿಲ್ಲದಿದ್ರೆ ನೀನು ಮೆಣಸಿನಪುಡಿ ಕುಟ್ಟಿ ಹೊಟ್ಟೆ ಹೊರಕೊಳ್ಳಬೇಕು ಎಂದೆಲ್ಲಾ. ಯಾರ ಕೋಪ ಯಾರ ಮೇಲೆ. ಬಾಸ್ ಹೇಳಿದಂತೆ "ನೋಡ್ರಿ ನೀವು ನಿಮ್ಮ ಅಸಮರ್ಥ್ಯದ ಫ್ರುಸ್ಟ್ರೇಶನ್ಸ್ ಆಫೀಸಿಗೆ ತರಬೇಡಿ. ಮನೆಯಲ್ಲೇ ಬಿಟ್ಟು ಬನ್ನಿ... "ಹೌದು , ನನ್ನನ್ನು ನಾನು ಚೂರು ಚೂರು ಮಾಡಿಕೋಬೇಕು. ಇದು ಆಫೀಸಿಗಾಗಿ, ಇದು ಅಮ್ಮನಿಗಾಗಿ, ಇದು ಹೆಂಡತಿಯೊಡನೆ ಬೆಡ್ ರೂಮಿಗಾಗಿ... ಅಬ್ಬ! ಯಾರೋ ನನ್ನ ಜೇಬಿಗೆ ಕೈ ಹಾಕುತ್ತಿದ್ದರು. ಸಾಯೋ ಕಾಲದಲ್ಲೂ ದುರಾಸೆ. ಎಲ್ಲರೂ ಒಬ್ಬೊಬ್ಬರನ್ನು ಬೈಯ್ಯುತ್ತಿದ್ದರು. ಅದರ ಮೂಲಕ ತಮ್ಮ ಅಭಯವನ್ನು ಹೊರಗೆ ಹಾಕುವಮ್ತೆ. ಇದೇನು, ಎಲ್ಲೆಲ್ಲೂ ಕೆಂಪು, ಹಳದಿ, ನೀಲಿ... ಸಾಧ್ಯವಿಲ್ಲ. ಈ ಗ ಒಂದೇ ದಾರಿಯೆಂದರೆ ನನ್ನನ್ನು ನಾನು ಬಿಟ್ಟುಕೊಡಬೇಕು .. ಎಲ್ಲಾ ಒದ್ದಾಟವನ್ನು ಹೋರಾಟವನ್ನು ಬಿಟ್ಟುಕೊಟ್ಟು ಏನಾದರಾಗಲಿ ಎಂದು ಕೈಯೆತ್ತಬೇಕು. ಹೌದು, ಈಗ ನನ್ನ ಕೈಯಲ್ಲೇನಿದೆ. ನಾನೇನೂ ಮಾಡಲಾರೆ. ಆದದ್ದು ಆಗಲಿ ಏನಾದರಾಗಲಿ....

ತಟ್ಟನೆ ಎಲ್ಲ ಹಗುರವೆನಿಸತೊಡಗಿತು. . ಎಲ್ಲಾ ಹೊರೆ ಒಂದೇ ಸಲ ಹೋದಂತೆ. ಈ ನೋವಿನಲ್ಲೂ ಮೋಡದ ಮೇಲೆ ತೇಲುತ್ತಿರುವಂತೆ. ಇನ್ನು ಹೆಚ್ಚು ಹೊತ್ತಿರಲಾರದು. ಹೌದು ನನ್ನನ್ನೂ ಅಲ್ಲಿಗೇ ಕೊಂಡೊಯ್ಯುವರು. ಅದೂ ಮಾರ್ಗ್ ನಲ್ಲಿ ದೇಹವನ್ನಿಟ್ಟು ಯಾರೂ ಗುರುತಿಸುವವರು ಇಲ್ಲದೆ...ನಾಗೇಶನೇನಾದರೂ ಬಂದರೆ...

ಬೆಳಗ್ಗೆ ಕಂಡದ್ದು ನಿಚ್ಚಳವಾಗಿ ನೆನಪಿತ್ತು. ಡಬಲ್ ಡೆಕರಿನ ಮಹಡಿಯ ಮುಂದಿನ ಸೀಟಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದಾಗ ನಮ್ಮ ಬಸ್ಸಿನ ಮುಂದೆ ಹೋಗುತ್ತಿದ್ದ ಇನ್ನೊಂದು ಡಬಲ್ ಡೆಕರನ್ನು ನೋಡುತ್ತಾ ಹೋಗುತ್ತಿದ್ದಾಗ, ಅದರ ಮೈತುಂಬ ಬಣ್ಣ ಬಣ್ಣದ ಪೆಪ್ಪರ್ ಮಿಂಟ್ ರಿಂಗುಗಳ ಚಿತ್ರ ಅನ್ನಿಸಿತ್ತು. ಹಾಗೆಯೇ ನಮ್ಮ ಬಸ್ಸೂ ಏನಾದರೂ ಬಲಿದುಕೊಂದಿರಬಹುದು. ಚಂಚಲ್ ಸೋಪಿನ ನೊರೆಯ ಮಧ್ಯದಿಂದ ಹೊರಬರುತಿರುವ ಅರೆ ನಗ್ನ ಸುಂದರಿ, ಸ್ವಡ್ ಬ್ಲೇಡಿನ ಹರಿತದಿಂದಲೇ ಗಂಡಾಗಿರುವ ಉದ್ದ ಕೂದಲಿನ ಹದಿಹರೆಯದವ. ಚೆಲ್ಲಾಡಿರುವ ಮಕ್ಕಳ ಬಣ್ಣದ ಪೆನ್ಸಿಲುಗಳು. ಕಾದರೆ ಅದ್ಯಾವುದೂ ಒಳಗೆ ಕೂತಿರುವ ನಮಗೆ ಏನೂ ಮಾಡುವುದೇ ಇಲ್ಲ. ಅದರ ಪರಿವೆಯೇ ನಮಗೆ ಇರುವುದಿಲ್ಲವಲ್ಲ.. ಎಷ್ಟು ವಿಚಿತ್ರ ಎನಿಸಿತ್ತು... ಆಗಲೇ... ಆ ಪೆಪ್ಪರ್ ಮಿಂತಿನ ಬಸ್ಸು ಸ್ವಲ್ಪ ಮುಂದೆ ಹೋದಾಗ ಕಂಡುಬಂದಿತ್ತಲ್ಲಾ... ಚಂದನವಾಡಿಯ ಕ್ರಿಮೆಟೇರಿಯಂ. ಹೌದು. ಸ್ಮಶಾನ ಭೂಮಿಯನ್ನು ಮುಚ್ಚಿದ್ದ ಕಬ್ಬಿಣದ ಗೇಟುಗಳು, ಎತ್ತರದ ಎಷ್ಟೋ ದಿನ ಸುಣ್ಣ ಕಾಣದ ಗೋಡೆಗಳು, ಒಳಗಡೆ ಆಕಾಶಕ್ಕೆ ಚಾಚಿರಬಹುದಾದ ಮಸಿಗಟ್ಟಿದ ಚಿಮಣಿ ಹೊರಗೋಡೆಯ ಮೇಲೆ ನಗುತ್ತಾ ತನ್ನ ಮಾಂಸಲ ದೇಹವನ್ನು ಪ್ರದರ್ಶಿಸುತ್ತಾ ನಿಂತಿದ್ದ ಆ ಫೈಲ್ ವಾನ್.. "ಬದುಕಿನಲ್ಲಿ ಬೇಸರವೇ? ಕೈಲಾಸ್ ರಸ್ ತೆಗೆದುಕೊಳ್ಳಿ... ನಿಮ್ಮ ಸಂಗಾತಿಯೊಂಡನೆ ಸಂತೃಪ್ತಿ ಜೀವನ ನಡೆಸಿ..." ಎಂಬ ಸಂದೇಶ. ಜೊತೆಗೇ ಕೈಲಾಸ್ ರಸ್ ನ ಬಾಟಲ್. ಹೌದು. ಇಂದು ನನ್ನನ್ನು ಹೊತ್ತುಕೊಂಡು ಹೋಗುವಾಗಲೂ ಅವನು ಹಾಗೇ ಅಲ್ಲೇ ನಿಂತಿರುತ್ತಾನೆ. ಸ್ನಾಯುಗಳನ್ನು ಉಬ್ಬಿಸುತ್ತಾ, ಕೈಲಾಸ್ ರಸ್ ತೆಗೆದುಕೊಳ್ಳಿ ಸಂಗಾತಿಯೊಡನೆ ಸಂತೃಪ್ತ ಜೀವನ ನಡೆಸಿ ಎಂದು ಸಾರುತ್ತಾ..

ಸುತ್ತಮುತ್ತಲಿನ ಜನ ಒಬ್ಬೊಬ್ಬರಾಗಿ ಬೀಳುತ್ತಿದ್ದರು. ಸಾಯುತ್ತಿದ್ದರೋ, ಮೂರ್ಛೆ ಹೋಗುತ್ತಿದ್ದರೋ? ಆದರೆ ನನಗೆ ಒಡಲು ಕಾಲುಗಳೇ ಬರಲಿಲ್ಲ. ಅಲ್ಲೇ ಬೇರುಬಿಟ್ಟಂತೆ ಇದ್ದಕ್ಕಿದ್ದಂತೆ ಜೇಬಿನಲ್ಲಿ ತಡಕಾಡಿದೆ. ಸಾಯುವ ಮೊದಲು ಒಂದು ಸಿಗರೇಟಾಅದರೂ ಸೇದಿ ಬಿಡೋಣ ಎಂದು ಜೇಬು ಖಾಲಿ... ಹಾಲೂ ಮುಂಡೇವು. ಪ್ರಾಣ ಹೋಗುತ್ತಿದ್ದರೂ ದುರಾಸೆ ಬಿಡೊಲ್ಲ. ಆ ಕ್ಷಣ ನನ್ನ ಪಕ್ಕದವನು ಕೆಳಗೆ ಬೀಳತೊಡಗಿದ. ಅವನ ಬಯಿಂದ ಕೊಂಚ ರಕ್ತದ ವಾಂತಿ. ಅವನೇನೋ ಹೇಳಲು ಪ್ರಯತ್ನಿಸುತ್ತಿದ್ದ... "ಸಾಬ್, ಹೇಗಾದರೂ ಮಾಡಿ... ನನ್ನನ್ನು... ಆಸ್ಪತ್ರೆ..." ಅವನ ಜೇಬಿನಿಂದ ಗೋಲ್ಡ್ ಪ್ಲೇಕ್ ಪ್ಯಾಕ್ ಇಣುಕುತ್ತಿತ್ತು. ಸಿಗರೇಟು! ಸರಕ್ಕನೆ ನಾನದನ್ನು ಎಳೆದುಕೊಂಡೆ. ಅದನ್ನು ನೋದಿದ ತಕ್ಷಣ ಬೇದುತ್ತಿದ್ದ ಅವನ ಕಣ್ಣುಗಳಲ್ಲಿ ವಿಚಿತ್ರ ಭಾವನೆ ತುಂಬಿಕೊಂಡಿತು. ನನ್ನತ್ತ ದಿಟ್ಟಿಸುತ್ತಲೇ ಹೋದ. ಮಾತು ನಿಲ್ಲಿಸಿ. ಅವನ ಕಣ್ಣುಗಳು ದೊಡ್ಡದಾಗುತ್ತಾ ಹೋದವು. ಹತ್ತಿರಹತ್ತಿರ ಬರತೊಡಗಿದವು... ದೂಷಿಸುತ್ತಾ.. ಕಿಡಿಕಾರುತ್ತಾ.. ನನ್ನನ್ನು ಒಳಗೆಳೆದುಕೊಳ್ಳಲು ಇಲ್ಲವಾಗಿಸಲು...

ಇದೇನು ಮಳೆ, ಎಲ್ಲಿಂದ ಮಳೆ. ಆದರೂ ಎದ್ದು ಒಡಲು ಕಾಲೇ ಬಾರದು "ಕ್ಯಾ ಹೋಗಯಾ, ಚಕ್ಕರ್ ಆಯಾ ಕ್ಯಾ..." ಯಾರೋ ಜೋರಾಗಿ ಭುಜ ಅಲ್ಲಾಡಿಸುತ್ತಿದ್ದರು. ಮುಖದ ಮೇಲೆ ನೀರು ಚಿಮುಕಿಸುತ್ತಿದ್ದರು. ನಿಧಾನವಾಗಿ ಮಸುಕುಮಸುಕಾಗಿ ಎಲ್ಲ ಆಕಾರ ತಳೆಯತೊಡಗಿತು. ಸುತ್ತಲೂ ನಾಕೈದು ಜನ, ಯಾರೋ ನೀರು ಕೊಡುತ್ತಿದ್ದರು. ಯಾರೋ ಗಾಳಿ ಹಾಕುತ್ತಿದರು. ಹೌದು ನಾನು ಆ ಸಬ್ ವೇ ಮೆಟ್ಟಿಲ ಮೇಲೆ ಮಲಗಿದ್ದೆ ಅಲ್ಲಿಂದ ಪಕ್ಕಕ್ಕೆ ಕಣ್ಣು ಹಾಯಿಸಿದೆ. ಸಬ್ ವೇಯ ಸ್ವಲ್ಪ ಭಾಗ ಮಾತ್ರ ಕಾಣಿಸುತ್ತಿತ್ತು. ಆ ಕುರುಡ ಅಲ್ಲೇ ನಿಂತಿದ್ದ. ಅವನ ಮುಖದ ಮೇಲೆ ಅದೇ ವಿಚಿತ್ರ ನಗೆ. ಮೆಲ್ಲಗೆ ಸಾವರಿಸಿಕೊಂಡು ಎದ್ದೆ. ಅವರೆಲ್ಲರನ್ನೂ ನೋಡಿ, "ಏನಿಲ್ಲ, ಈಗ ಸರಿಯಾಗಿದೀನಿ ಥ್ಯಾಂಕ್ಸ್" ಎಂಡೆಲ್ಲಾ ಬಡಬಡಸಿದೆ. ನನ್ನನ್ನು ಬಿಟ್ಟು ನಿಧಾನವಾಗಿ ಅವರೆಲ್ಲಾ ತಮ್ಮ ಪಾಡಿಗೆ ತಾವು ಹೊರಟು ಹೋದರು. ನಾನು ಎದ್ದು ಪ್ಯಾಂಟು, ಶರಟು ಸರಿ ಮಾಡಿಕೊಂಡು ತಲೆ ಕೂದಲಲ್ಲಿ ಕೈಯಾಡಿಸಿದೆ. ನಂತರ ಜೇಬಿನಲ್ಲಿ ತಡಕಾಡಿದೆ. ಎಲ್ಲಾ ಇದ್ದ ಹಾಗೇ ಇತ್ತು. ಸಬ್ ವೇ ಹೊರಗೆ ಬಂದು ರಸ್ತೆಯ ಮುಂದೆ ನಿಂತೆ. ಎಷ್ಟು ಹೊತ್ತಾದರೂ ಸರಿ, ಈ ವಾಹನಗಳ ಮಧ್ಯೆ ದಾಟಲು ಸ್ವಲ್ಪ ಸಮಯ ಸಿಗುವವರೆಗೂ ಇಲ್ಲೇ ಕಾಯುವುದೆಂದು. ಆಗ ಕಂಡಿತು. ರಸ್ತೆಯ ಆಚೆ ಬದಿಯಲ್ಲಿ ಒಂದು ದೊಡ್ಡ ಗುಂಪು, ರಸ್ತೆ ದಾಟಲು ಕಾದು ನಿಂತಿದ್ದರು. ಅಷ್ಟೊಂದು ಬಿಳಿಯ ಬಟ್ಟೆಯ ಜನ, ಏನೋ ಹೊತ್ತು ನಿಂತಿದ್ದರು. ಹೌದು ಅದೊಂದು ಶವಯಾತ್ರೆ ಮೆಲ್ಲನೆ ಕೇಳಿ ಬರುತ್ತಿತ್ತು "ರಾಮ್ ನಾಮ್ ಸತ್ಯ ಹೈ...ರಾಮ್ ನಾಮ್ ಸತ್ಯ ಹೈ..." ಸ್ವಲ್ಪ ಹೊತ್ತು ನಿಂತು ನಂತರ ತಾಳ್ಮೆ ಕಳೆದುಕೊಂಡು ಒಬ್ಬ ಗುಂಪಿನಿಂದ ಹೊರಬಂದ. ಅಧಿಕಾರದಿಂದ ವಾಹನಗಳಿಗೆ ನಿಲ್ಲಲು ತಾನೇ ಸನ್ನೆ ಮಾಡಿದ. ಒಂದು ಕೈಯಿಂದ ಶವದತ್ತ ತೋರಿಸುತ್ತಾ, ತಕ್ಷಣ ವಾಹನಗಳೆಲ್ಲಾ ಝುಕ್ಕನೆ ನಿಂತವು. ನಿಧಾನವಾಗಿ ತಲೆತಗ್ಗಿಸಿ ಅವರೆಲ್ಲಾ ಇತ್ತ ಬರತೊಡಗಿದರು. ಹೌದು, ಇವರೆಲ್ಲಾ ಚಂದನವಾಡಿಗೆ ಹೋಗುತ್ತಾರೆ. ಈಗಲೂ ಗೋಡೆಯ ಮೇಲೆ ಆ ಮಾಂಸಲ ದೇಹದ ಫೈಲ್ವಾನ್ ಹಾಗೆ ನಗುತ್ತಾ ನಿಂತಿರುತ್ತಾನೆ. ಕೈಲಾಸ್ ರಸ್ ತೆಗೆದುಕೊಳ್ಳಿ. ಸಂಗಾತಿಯೊಡನೆ ಸಂತೃಪ್ತ ಜೀವನ ನಡೆಸಿ... ಎಂದು ಸಾರುತ್ತಾ, ಸ್ನಾಯುಗಳನ್ನು ಕುಣಿಸುತ್ತಾ.... ರಾಮ್ ನಾಮ್ ಸತ್ಯ ಹೈ... ರಾಮ್ ನಾಮ್ ಸತ್ಯ ಹೈ....ನಾನು ಈ ಕಡೆಯಿಂದ ರಸ್ತೆ ದಾಟಲು ಶುರು ಮಾಡಿದೆ. ಆದರೆ... ಈ ಶವಯಾತ್ರೆ ಆರಾಮವಾಗಿ ಸಬ್ ವೇ ಮೂಲಕವೇ ಹೋಗಬಹುದಿತ್ತಲ್ಲಾ. ಹಾಗೇಕೆ ಮಾಡಲಿಲ್ಲ ಎಂದು ಅನಿಸಿತು. ಎಂದೂ ಶವಯಾತ್ರೆ ಸಬ್ ವೇ ಮೂಲಕ ಹೋಗಿದ್ದು ಕಂಡೇ ಇಲ್ಲವಲ್ಲ ಎಂಬ ಅರಿವು ಮೂಡಿ ಅಚ್ಚರಿಯಾಯಿತು.

# ನಮಸ್ತೇ ಶಾರದಾ ದೇವಿ ಕಾಶ್ಮೀರ ಪುರವಾಸಿನಿ!!!

ಕಾಶ್ಮೀರಪುರವಾಸಿನಿಯಾದ ಶಾರದಾ ದೇವಿಯನ್ನು ಅಭಿನಮಿಸುವ ಈ ಶ್ಲೋಕವನ್ನು ಬಾಲ್ಯದಲ್ಲಿ ನಾವು ಕರ್ನಾಟಕದ ಯಾವುದೋ ಮೂಲೆಯಲ್ಲಿರುವ ಒಂದು ಪುಟ್ಟ ಹಳ್ಳಿಯಲ್ಲಿ ಕುಳಿತು ನಿತ್ಯ ಪಠಿಸುತ್ತಿದ್ದೆವು! ನಾವೆಂದರೇನು, ಪ್ರತಿಯೊಬ್ಬ ಸನಾತನ ಭಾರತೀಯನೂ ಈ ಶ್ಲೋಕವನ್ನು ಪಠಿಸಿದವನೇ! ಕರ್ನಾಟಕವೇನು, ಭಾರತವರ್ಷದ ಉದ್ದಗಲವೆಷ್ಟೋ ಈ ಶ್ಲೋಕದ ವ್ಯಾಪ್ತಿಯಷ್ಟು!

ಹೌದು! ಕಾಶ್ಮೀರದ ಶಾರದೆಯ ವ್ಯಾಪ್ತಿ ಕಾಶ್ಮೀರಮಾತ್ರವಲ್ಲ, ಸಮಸ್ತ ಭಾರತ ದೇಶ!

ಕಾಶ್ಮೀರವಂತೂ ಶಾರದಾಮಯ!

ಒಂದು ಕಾಲದಲ್ಲಿ ಕಾಶ್ಮೀರವನ್ನು ಶಾರದಾ ದೇಶವೆಂದೇ ಕರೆಯುತ್ತಿದ್ದರು. ಅಲ್ಲಿಯ ಲಿಪಿಯ ಹೆಸರು ಶಾರದಾ! ಶಾರದಾ ಮಂದಿರವಿರುವ ಗ್ರಾಮಕ್ಕೆ ಆಗಲೂ, ಈಗಲೂ – ಅದು ಪಾಕಿಸ್ತಾನದ ವಶವಾದ ಬಳಿಕವೂ – ಶಾರದಾಗ್ರಾಮವೆಂದೇ ಹೆಸರು! ಸಮ್ಮುಖದಲ್ಲಿರುವ ಪರ್ವತಶಿಖರವೊಂದನ್ನು ಈಗಲೂ ಶಾರದೀ ಎಂದು ಕರೆಯುತ್ತಾರೆ.

ಆ ಊರಿನಲ್ಲಿ ಈಗ ಉಳಿದುಕೊಂಡಿರುವುದು ಶತಮಾನಗಳ ಹಿಂದೆ ಮತಪರಿವರ್ತನೆಗೊಳಗಾದ ಮುಸಲ್ಮಾನರು ಮಾತ್ರ. ಆದರೆ ಇಂದಿಗೂ ಅವರು ಆಣೆ ಹಾಕುವುದು, ಪ್ರಮಾಣ ಮಾಡುವುದು ತಾಯಿ ಶಾರದೆಯ ಹೆಸರಿನಲ್ಲಿ!

ಕಾಶ್ಮೀರದ ಮೂಲ ಜನಾಂಗವನ್ನು ಕಾಶ್ಮೀರಿ ಪಂಡಿತರು ಎಂದೇ ಕರೆಯುತ್ತಾರೆ. ಪಾಂಡಿತ್ಯವು ವಿದ್ಯೆಯಿಂದ; ವಿದ್ಯೆಯು ಶಾರದೆಯಿಂದ. ಕಾಶ್ಮೀರಿ ಪಂಡಿತರು ಎಂಬ ಅಭಿಧಾನವು ಆ ಜನಾಂಗಕ್ಕೆ ಶಾರದಾನುಗ್ರಹ!

ನಿಮಗೆ ಗೊತ್ತೇ? ಒಂದು ಕಾಲದಲ್ಲಿ, ಒಂದಿಡೀ ಜನಾಂಗದಲ್ಲಿ ಜ್ಞಾನಿಯಲ್ಲದ ಒಬ್ಬನೇ ಒಬ್ಬ ಮನುಷ್ಯನಿರಲಿಲ್ಲ! ಆದುದರಿಂದಲೇ ಆ ಜನಾಂಗವೇ ಪಂಡಿತರು ಎಂದು ಕರೆಯಲ್ಪಟ್ಟಿತು. ಒಂದು ಕಾಲದಲ್ಲಿ, ಅಖಂಡ ಭರತಖಂಡದಲ್ಲಿ ವಿದ್ಯೆಯ ಪರಮೋಚ್ಚ ಪರೀಕ್ಷೆಯಾಗುತ್ತಿದ್ದುದು ಕಾಶ್ಮೀರದಲ್ಲಿ. ಅಲ್ಲಿ ಸೈ ಎನಿಸಿಕೊಂಡರೆ ಅವನು ನಿಜವಾದ ಪಂಡಿತ! ಅಲ್ಲಿಯವರೆಗೆ ಅವನ ಪಾಂಡಿತ್ಯ ಪೂರ್ಣವಲ್ಲ.

ವಿದ್ಯಾಸಾಮ್ರಾಜ್ಯವಾಗಿತ್ತು ಕಾಶ್ಮೀರ!

ಭಾರತವು ದೇವಸ್ಥಾನವಾದರೆ ಅದರ ಶಿಖರ ಕಾಶ್ಮೀರ. ಕಾಶ್ಮೀರವು ಭಾರತದ ಶಿಖರವಾದರೆ ಅದರ ಕಲಶವು ಶಾರದಾಪೀಠ! ನಾವು-ನೀವಿರುವ ಈ ಕಾಲದ ದೌರ್ಭಾಗ್ಯವೆಂದರೆ ಭಾರತದ ಕಲಶವೆನಿಸಿದ ಶಾರದಾಮಂದಿರಕ್ಕೆ ಇಂದು ಕಲಶವಿರಲಿ, ಛಾವಣಿಯೇ ಇಲ್ಲ! ಸಮಸ್ತ ಭಾರತೀಯರ ಹೃದಯಮಂದಿರದಲ್ಲಿ ವಿದ್ಯಾಮೂರ್ತಿಯಾಗಿ ಪೂಜಿಸಲ್ಪಡುವ ಶಾರದೆಯ ಮೂಲ ಮಂದಿರದಲ್ಲಿ ಮೂರ್ತಿಯೇ ಇಲ್ಲ! ಇನ್ನು ಪೂಜೆಯೆಲ್ಲಿ!? ಮೋಟು ಗೋಡೆಗಳ, ಮುರುಕು ಪೀಠದ, ಭಗ್ನಾವಶೇಷಗಳ ಇಂದಿನ ಶಾರದಾಪೀಠದ ದುರಂತದೃಶ್ಯವನ್ನು ನೋಡಿ, ಕರಗಿ-ಮರುಗದಿದ್ದರೆ ನೀವು ಭಾರತೀಯರೇ ಅಲ್ಲ!

ಕೇವಲ ಮಂದಿರಮಾತ್ರದಲ್ಲಲ್ಲ, ಶಾರದೆಯು ಕಾಶ್ಮೀರದ ಅಸಂಖ್ಯ ಪಂಡಿತರ ಮಸ್ತಿಷ್ಕಗಳಲ್ಲಿ, ಮುಖಗಳಲ್ಲಿ ವಿದ್ಯಾವಾಹಿನಿಯಾಗಿ ವಿರಾಜಿಸುತ್ತಿದ್ದಳು.

ಈಗ ಕಾಲ ಬದಲಾಗತೊಡಗಿದೆ. ಅಥವಾ ಕಾಶ್ಮೀರಿ ಪಂಡಿತರ ಎಡೆಬಿಡದ ಹೋರಾಟಗಳು ಕಾಲವನ್ನು ಬದಲಾಯಿಸುತ್ತಿವೆ. ಶಾರದಾಪೀಠದ ಮತ್ತು ಕಾಶ್ಮೀರಿ ಪಂಡಿತರ ದುರವಸ್ಥೆಗೆ ಪ್ರಧಾನ ಕಾರಣವಾದ ಪಾಕಿಸ್ಥಾನವು ಇತ್ತೀಚೆಗೆ ಶಾರದಾದರ್ಶನಕ್ಕೆ ಅವಕಾಶ ನೀಡುವ ಮಾತಾಡುತ್ತಿದೆ! ಮಾತ್ರವಲ್ಲ, ಯಾತ್ರಿಗಳ ಅನುಕೂಲಕ್ಕಾಗಿ, ಶಾರದಾಗ್ರಾಮದ ಪರಿಸರದಲ್ಲಿ ರಸ್ತೆಯೇ ಮೊದಲಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನು ಮಾಡುವುದಾಗಿಯೂ ಪ್ರಕಟಿಸಿದೆ. ಈಗಿನ ಜಮ್ಮು-ಕಾಶ್ಮೀರ ಸರಕಾರವು ಶಾರದಾಯಾತ್ರೆಗೆ ತನ್ನ ಬೆಂಬಲವನ್ನು ಸಾರ್ವಜನಿಕವಾಗಿಯೇ ಘೋಷಿಸಿದೆ.

ಇನ್ನು ಶಾರದಾ ಗ್ರಾಮದ ಮುಸಲ್ಮಾನರು; ಅವರೊಂದು ವಿಸ್ಮಯ!

ಶಾರದಾಪೀಠದ ಪುನರುಜ್ಜೀವನ ಅವರ ತವಕ; ಕಾಶ್ಮೀರೀ ಪಂಡಿತರ ಶಾರದಾಯಾತ್ರೆಗೆ ಅವರು ಪೂರಕ. ನಂಬಲಸಾಧ್ಯವಾದ ಸಂಗತಿಯೆಂದರೆ ಇತ್ತೀಚೆಗೆ ಶಾರದಾಮಂದಿರದಲ್ಲಿ ಬಹುಕಾಲದ ಬಳಿಕ ಪೂಜೆಯೊಂದು ನಡೆಯಿತು! ಆ ಪೂಜೆಯನ್ನು ನೆರವೇರಿಸಿದವರು ಶಾರದಾ ಗ್ರಾಮದ ಮುಸಲ್ಮಾನರು! ಅವರು ಮೊದಲು ಮೂರ್ತಿಯಿದ್ದ ಸ್ಥಳದಲ್ಲಿ ಪುಷ್ಪಗಳಿಂದ ಪೂಜೆ ನಡೆಸಿದ್ದಾರೆ; ಗರ್ಭಗುಡಿಯ ಗೋಡೆಯಲ್ಲಿ ಶಾರದಾ ದೇವಿಯ ಭಾವಚಿತ್ರವನ್ನು ಪ್ರತಿಷ್ಠಾಪಿಸಿದ್ದಾರೆ; ಪುಷ್ಪಪ್ರಸಾದವನ್ನೂ ಮತ್ತು ಶಾರದಾಭೂಮಿಯ ಮಂಗಲಮಯವಾದ ಮಣ್ಣನ್ನೂ ಪಂಡಿತರುಗಳಿಗೆ ಅಂಚೆಯ ಮೂಲಕ ಕಳುಹಿಸಿದ್ದಾರೆ!

ಗಮನಿಸಿ; ಇವೆಲ್ಲವನ್ನೂ ಪರಮಪ್ರೇಮದಿಂದ ನೆರವೇರಿಸಿದವರು ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರದಲ್ಲಿ ವಾಸಿಸುವ ಮುಸಲ್ಮಾನರು! ಇಂದು ಅವರ ಬದುಕು ಇಸ್ಲಾಂ ಮತದಲ್ಲಿ; ಅವರಿರುವ ಊರು ಪಾಕಿಸ್ತಾನದ ವಶದಲ್ಲಿ!

ಸಾಕಾರ ದೇವರ ಪೂಜೆಯನ್ನು ಅತ್ಯುಗ್ರವಾಗಿ ವಿರೋಧಿಸುವ ಮುಸಲ್ಮಾನರು, ಪಾಕಿಸ್ತಾನದ ಅಂಕೆಗೊಳಪಟ್ಟ ಪ್ರದೇಶದಲ್ಲಿ, ಅದೂ ಉಗ್ರಗಾಮಿಗಳ ಹಾವಳಿಯ ನಡುವೆ ಪುಷ್ಪಗಳಿಂದ ಶಾರದಾಪೀಠಕ್ಕೆ ಪೂಜೆಗೈದು, ಪ್ರಸಾದ ಕಳುಹಿಸಿದರೆಂಬುದನ್ನು ನಂಬಲಾಗದು!

ಆದರೆ ಸ್ವತಃ ಕಾಶ್ಮೀರಿ ಪಂಡಿತರ ನಿಯೋಗವೇ ನಮ್ಮನ್ನು ಭೇಟಿಯಾಗಿ, ಪ್ರಸಾದವಿತ್ತು, ಪುಷ್ಪಪೂಜೆಯ ಭಾವಚಿತ್ರವನ್ನೂ, ಮತ್ತು ಪಾಕಿಸ್ತಾನದಿಂದ ಪಂಡಿತರಿಗೆ ಬಂದ, ಅಲ್ಲಿಯ ಮೊಹರಿರುವ ಲಕೋಟೆಯನ್ನೂ ತೋರಿಸಿದಾಗ ನಂಬಲೇಬೇಕಾಯಿತು!

ಕಾಶ್ಮೀರದ ಶಾರದೆಯ ಪ್ರಸಾದ ಪುಷ್ಪಗಳು, ಶಾರದಾ ಗ್ರಾಮದ ಮಣ್ಣು ನಮ್ಮ ಮಠದಲ್ಲಿದೆಯೆಂಬುದು ವಿಖ್ಯಾತ-ವ್ಯಾಖ್ಯಾನಸಿಂಹಾಸನವು ನಮ್ಮಲ್ಲಿದೆಯೆಂಬಷ್ಟೇ ಹೆಮ್ಮೆ ನಮಗೆ!

ಶಂಕರರಿಗೂ ಶಾರದೆಗೂ ಅವಿನಾಭಾವದ ಸಂಬಂಧ!

ಕಾಶ್ಮೀರಪುರವಾಸಿನಿಯ ಸನ್ನಿಧಿಯಲ್ಲಿಯೇ ಅಲ್ಲವೇ ಆದಿ ಶಂಕರರು ಸರ್ವಜ್ಞಪೀಠವನ್ನೇರಿ ಜಗದ್ಗುರುವೆನಿಸಿಕೊಂಡಿದ್ದು!

ದಕ್ಷಿಣ ದೇಶದ ಯಾರೊಬ್ಬ ಪಂಡಿತನೂ ಆವರೆಗೆ ಅರಿವಿನ ಆ ಎತ್ತರವನ್ನು ಏರದ ಕಾರಣ ಶಾರದಾ ಪೀಠದ ದಕ್ಷಿಣದ್ವಾರವೇ ಅಂದಿನವರೆಗೆ ತೆರೆದಿರಲಿಲ್ಲ! ಶಂಕರರು ತಮ್ಮ ವಿದ್ವತ್ತಿನಿಂದ ಕಾಶ್ಮೀರದ ಪಂಡಿತಮಂಡಲವನ್ನು ಮಂತ್ರಮುಗ್ಧಗೊಳಿಸಿ, ದಕ್ಷಿಣದ್ವಾರವನ್ನು ತೆರೆಯಿಸಿ, ಒಳ ಪ್ರವೇಶಿಸಿದರು!

ಶಸ್ತ್ರದಿಂದಲ್ಲ, ಶಾಸ್ತ್ರದಿಂದ ಅವರು ಜ್ಞಾನಸಾಮ್ರಾಜ್ಯದ ಆ ಮಹಾರಾಜಧಾನಿಯನ್ನು ಗೆದ್ದು, ಸರ್ವಜ್ಞಪೀಠವನ್ನೇರಿದರು!

ಅಷ್ಟು ಮಾತ್ರವಲ್ಲ, ಅಲ್ಲಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿ, ಶಾರದೆಗೆ ನೈಜಪೂಜೆ ಸಲ್ಲಿಸಿದರು!

**ನಮಸ್ತೇ ಶಾರದಾ ದೇವಿ ಕಾಶ್ಮೀರಪುರವಾಸಿನಿ | ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ||**

ಮೂಲ ಶ್ರೀ ರಾಮಚಂದ್ರಾಪುರ ಮಠ ...

**Matrimonial**

Alliance invited for a Stanika kannada Girl DOB: 23.02.1996 Time: 2.10a.m. Place: Mumbai, Nakshatra: Ashwini, Rashi: Mesha, Gotra: Angirasa, Height:5ft 7inches, Caste: Stanika Brahmin, Working Location: MNC Company in Mumbai.
Contact: Mrs. Hema Rao    Contact No.: 9850803518
Email Id: hemarao01@gmail.com

Alliance Invited for a Smarta, Kannada Brahmin boy, DOB: 27th May 1992, Gotra: Kashyapa, Rashi: Meena, Nakshatra: Uttarabhadra, Qualification: B.E. Production VJTI- Mumbai working at Easyserve Marketing, Operation Head in Mumbai.
Contact: Mrs. Sriprabha Sathyanarayana
Contact No.: 9870494853

# ಬರೆದೆ ನೀನು ನಿನ್ನ ಹೆಸರ ನನ್ನ ಬಾಳ ಪುಟದಲಿ...

ವನಜ ರಾಜನ್

ಇದೊಂದು ಹಳೆಯ ಚಿತ್ರಗೀತೆಯ ಮೊಟ್ಟಮೊದಲ ಸಾಲು. ಆ ಹಳೆ ಹಾಡು ಬಾಡು ಎಲ್ಲಾ ಯಾಕೀಗ ಅಂತ ಮೂಗು ಮುರಿಯುತ್ತಿದ್ದೀರಿ ಅಲ್ಲವೇ? ನನಗೆ ಗೊತ್ತು. "ಹಾಡು ಹಳೆಯದಾದರೇನು ಭಾವ ನವ ನವೀನ" ಮತ್ತೊಂದು ಭಾವಗೀತೆ ನೀವು ಕೇಳಿರಲೇಬೇಕು. ಇಂದಿನ ಅವಸರ ಆತುರ ಹರಿ ಸ್ಕರಿ ದಿನಗಳಲ್ಲಿ ( hurry scurry ವಿಪರೀತ ಆತುರ, ನಿಗಂಟಿನಲ್ಲಿದೆ ಇದರ ಅರ್ಥ) ನಿಧಾನ ಪ್ರಧಾನ ಅನ್ನೋ ಮಾತುಗಳು ಮಾಯವಾಗಿ ಬಹಳ ಕಾಲವಾಯಿತು. ಒಂದೆಡೆ ಕೂತು ಕಾಗದ ಬರೆಯುವವರನ್ನು ಎಲ್ಲಾದರೂ ಕಂಡಿದ್ದೀರಾ? ಭಾಷೆಯ ಸೊಗಡನ್ನು ಬರಹದ ಸೊಗಸನ್ನು ಅಕ್ಷರ ಬ್ರಹ್ಮನನ್ನು ಆಧುನಿಕ ತಂತ್ರಜ್ಞಾನ (ಎಸ್ ಎಮ್ ಎಸ್) ಎಂಬ ಹಣೆಪಟ್ಟಿ ಕಟ್ಟಿಕೊಂಡು ಎಲ್ಲಿಂದಲೋ ಬಂದ ಬ್ರಹ್ಮ ರಾಕ್ಷಸನು ನುಂಗಿ ನೀರು ಕುಡಿದು ಹೋಗಿಯೇ ಬಿಟ್ಟನು. ಛೆ! ಬದುಕು ಸಾರವಿಲ್ಲದೆ ಬರಡಾಗಿ ಹೋಯಿತು ಎಂದೆನಿಸುತ್ತದೆ. ಪೋಸ್ಟ್ ಮ್ಯಾನ್ ನನ್ನು ನೋಡುವುದೇ ಅಪರೂಪವಾಗಿ ಹೋಗಿದೆ. ಚಳಿ,ಗಾಳಿ, ಮಳೆ ಬಿಸಿಲಲೆನ್ನದೆ ನಮ್ಮ ದೇಶದ ಗಡಿಯನ್ನು ಕಾಯುತ್ತಿರುವ ಸೈನಿಕರಿಗೆ ಮನೆಯಿಂದ (ಅಮ್ಮನಿಂದಲೂ/ ಅಪ್ಪನಿಂದಲೂ) ಪತ್ರ ಬಂದರೆ ಅದರಲ್ಲಿರುವ ವಿಷಯಗಳು ಬಹಳ ಸಾಮಾನ್ಯ ವೆಂದು ನಮಗೆ ಅನಿಸಬಹುದು. (ಮನೆಯಲ್ಲಿರುವ ಗೌರಿ ಯೋ ಗಂಗೆ ಯೋ ಹಸು ಕರು ಹಾಕಿದ ವಿಷಯ ಅಥವಾ ಮಳೆ ಬಂದು ಪಸಲು ಚೆನ್ನಾಗಿ ಬಂದಿರುವ ವಿಷಯ ಇತ್ಯಾದಿ) ತನ್ನ ಕೈ ಸೇರಿದ ಕಾಗದವನ್ನು ಆ ಸೈನಿಕ ಮತ್ತೆ ಮತ್ತೆ ಓದಿದ್ದೆ ಆದರೆ ಆಶ್ಚರ್ಯ ಪಡಬೇಕಾಗಿಲ್ಲ. ಯಾಕೆಂದರೆ ತನ್ನ ಊರು ತನ್ನ ಮನೆಯ ನೆನಪುಗಳೇ ಅವನಿಗೆ ಅಷ್ಟೆಲ್ಲ ಖುಷಿ ನೀಡುತ್ತಿದೆ. ಪ್ರತಿಯೊಂದು ಎಳೆ ದೂರ ದೇಶದಲ್ಲಿದ್ದರೆ ಅವನ ಪತ್ನಿಯ ವಿರಹ ವೇದನೆ ಕಾತುರ ಭಾವೋದ್ವೇಗ ಪ್ರೇಮ ಉಕ್ಕಿ ಬಂದು ಶಾಹಿಯ (ink) ಜೊತೆ ಕಾಗದದ ಮೇಲೆ ಹರಿದು ಬಂದದ್ದೇ ಆದರೆ ಒಂದು ಅಪೂರ್ವ ಪ್ರೇಮ ಕಾವ್ಯವೇ ಸೃಷ್ಟಿಯಾಗಲುಬಹುದು. "ನಾ ಮೆಚ್ಚಿದ ಹುಡುಗನಿಗೆ ಕಾಣಿಕೆ ತಂದಿರುವೆ ನಾ ಬರೆದ ಪದಗಳನ್ನು ಚುಂಬಿಸಿ ಕಳಿಸಿರುವೆ ನಾ"... ಈ ಸಾಲುಗಳನ್ನು ಓದಿದ ಪತಿಗೆ ಎಷ್ಟೋ ರೋಮಾಂಚನವಾಗಬಹುದು! ಪತಿಯಿಂದ ಪ್ರತ್ಯುತ್ತರಕ್ಕೆ ಕಾದು ಕುಳಿತ ಪತ್ನಿಯ ಮಧುರ ವೇದನೆ ಹೇಗಿರಬಹುದು ಕಲ್ಪನೆ ಮಾಡಿ ನೋಡಿ.


ಮೊಬೈಲ್ ಇ-ಮೇಲ್ ಗಣಕಯಂತ್ರದ ಮೂಲಕ ಸುದ್ದಿ ಸಮಾಚಾರ್ಗಳ ಪರಸ್ಪರ ವಿನಿಮಯ ತಟ್ಟನೆ ನಡೆಯುವುದೇನೋ ನಿಜ ಆದರೆ ಅದರಲ್ಲೇನಿದೆ ಮಜಾ? ಎಸ್ ಎಂ ಎಸ್ ಲಿಂಗೋ ನಲ್ಲಿ (s.m.s. lingo) ಕಳುಹಿಸುವ ಪ್ರೇಮ ಸಂದೇಶಗಳಲ್ಲಿ ಸಾರವೇನಿದೆ? ಅಂಗೈಯಲ್ಲಿಟ್ಟುಕೊಂಡು ಬೆರಳ ತುದಿಯಿಂದ ಬಟನ್ಗಳನ್ನು ಒತ್ತಿ ಒತ್ತಿ ಸಂದೇಶಗಳನ್ನು ಕಳಿಸುತ್ತಲೇ ಇದ್ದರೆ ಆರ್ ಎಸ್ ಎಸ್ (repetitive strain syndrome) ಬರುವುದೇ ವಿನಹ ಅದರಿಂದಾಗಿ ಸಹಿಸಲ ಸಾಧ್ಯವಾದ ನೋವು ಉಂಟಾಗುವುದಲ್ಲದೆ ಮತ್ತೇನಿಲ್ಲ. ಏನು ಸುಖ ಸಂತೋಷ ಉಂಟಾಗುವುದಿಲ್ಲ. ಶ್ರೀಯುತ ಕೆ ಎಸ್ ರಂಗಪ್ಪ (ಉಪಕುಲಪತಿ ಮೈಸೂರು ವಿಶ್ವ ವಿದ್ಯಾಲಯ) ಈ ಬಗ್ಗೆ ಹೇಳುವುದೇನೆಂದರೆ ಎಸ್ಎಂಎಸ್ ಲಿಂಗೋವಿನಿಂದಾಗಿ ಭಾಷೆ ಹಾಳಾಗಿ ಹೋಯಿತು. ಅಷ್ಟೇ ಅಲ್ಲ ಇದೇ ಗೀಳು ಬೆಳೆಸಿಕೊಂಡು ಹೋಗಿರುವುದರಿಂದ ವ್ಯಾಕರಣ ಶಾಸ್ತ್ರವು ವ್ಯತ್ಯಯಗೊಂಡಿದೆ. (Aubation with SMS lingo is marrying the language grammar is the first casualty) ಪೆನ್ ಕೈನಲ್ಲಿ ಹಿಡಿದು ಕಾಗದದ ಮೇಲೆ ಒತ್ತಿ ಬರೆಯುವುದರಿಂದ ಮಣಿಕಟ್ಟು (wrist) ಅಂಗೈ (palm) ಬೆರಳುಗಳಿಗೆಲ್ಲ ಒಳ್ಳೆಯ ವ್ಯಾಯಾಮ ದೊರೆಯುವುದೇ ಅಲ್ಲದೆ ನರ ನಾಡಿಗಳಲ್ಲೆಲ್ಲ ಸಮರ್ಪಕವಾಗಿ ರಕ್ತ ಸಂಚಾರ ವಾಗುವುದರಲ್ಲಿ ಸಂದೇಹವಿಲ್ಲ. ಪ್ರಯತ್ನ ಮಾಡಿ ನೋಡಿ!

ವಿಜ್ಞಾನ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಮಾನವ ಮುನ್ನಡೆಯನ್ನು ಅತ್ಯದ್ಭುತವಾಗಿ ಸಾಧಿಸಿದ್ದಾನೆ. ಹೊಸ ಹೊಸ ವಿಸ್ತರಗಳು ಬೆಳಕಿಗೆ ಬಂದಿವೆ, ವಿಶೇಷವಾಗಿ ವೈದ್ಯಕೀಯ ಕ್ಷೇತ್ರಗಳಲ್ಲಿ ಹೊಸ ಹೊಸ ತಂತ್ರಜ್ಞಾನದಿಂದ ಬಳಕೆಗೆ ಬಂದಿರುವ ಸಾಧನ ಸಲಕರಣೆಗಳಿಂದಾಗಿ ಕಾಯಿಲೆಗಳನ್ನು ಪ್ರಾರಂಭದಲ್ಲಿಯೇ ಪತ್ತೆ ಹಚ್ಚಿ ಕಾರಣ ಕಂಡು ಹಿಡಿದು ಚಿಕಿತ್ಸೆ ನೀಡಿ ಮೂಲೋದ್ಘಾಟನೆ ಮಾಡಿ ರೋಗಿಗೆ ಪುನರ್ಜೀವನ ನೀಡಲು ಸಾಧ್ಯವಾಗಿದೆ. (ಉದಾಃ ಸಿ. ಟಿ.ಸ್ಕ್ಯಾನ್, ಎಂ.ಆರ್.ಐ ಇತ್ಯಾದಿ) ವೈದ್ಯಕೀಯ ಕ್ಷೇತ್ರಕ್ಕೆ ಆಧುನಿಕ ತಂತ್ರಜ್ಞಾನ ವರವಾಗಿ ಪರಿಣಮಿಸಿದೆ ಎಂದರೆ ಅತಿಶಯೋಕ್ತಿ ಎನಿಸುವುದಿಲ್ಲ. "Old is Gold" ಸಣ್ಣ ಉಕ್ತಿ ಇದೆ. ಈ landline phone 24/7 ನಮ್ಮ ಮನೆಯನ್ನು ಮನೆಯವರನ್ನು ಮಕ್ಕಳು ನಿಗ ವಹಿಸಿ ನೋಡಿಕೊಂಡಿರುವ ಹಿರಿಯರಾದ ನಮ್ಮ ಅಜ್ಜಿ ತಾತ ಅಥವಾ ಅತ್ತೆ ಮಾವರಂತೆ ಅಲ್ಲವೇ? ನಮ್ಮ ಕಷ್ಟ ಸುಖಕ್ಕೆ ಆದರ ಆಧಾರ ಬೆಂಬಲ ನೀಡುವ ಅವರ ಸ್ಥಾನಮಾನ ಹಿರಿಯತನ ಪವಿತ್ರತೆಗೆ ಮೊಬೈಲ್ ಸಮನಾಗಲು ಸಾಧ್ಯವೇ? ಸಮಯ ಅಥವಾ ತುರ್ತು ಪರಿಸ್ಥಿತಿಯಲ್ಲಿ ಸಿಗ್ನಲ್ (Signal) ಸಿಕ್ಕದಿದ್ದರೆ ನಮಗೆ ಒಬದಗೆ ಬರುವುದೇ? ಆದ್ದರಿಂದ ಈ ಹೋಲಿಕೆಯನ್ನು ಮನಸ್ಸಿನಲ್ಲಿಟ್ಟುಕೊಂಡ ಹಳೆಯದು ಎಂಬ ಹಣೆಬರ ಬರೆದು ಯಾವುದೇ ಉಪಕರಣವಾಗಲಿ ಸಂಬಂಧವಾಗಲಿ ಕಡೆಗಣಿಸಿ ಅಟ್ಟಕ್ಕೇರಿಸುವುದು ಸೂಕ್ತವಲ್ಲ ಎಂದೆ ನನ್ನ ವಾದ. ಹೊಸ ನೀರು ಬಂತು ಹಳೆ ನೀರು ಕೊಚ್ಚಿಕೊಂಡು ಹೋಯಿತು ಎಂದಾಗಬಾರದು!

ಇತ್ತೀಚೆಗೆ ದಿನಪತ್ರಿಕೆ ಒಂದರಲ್ಲಿ ಸಮಾಚಾರ ಒಂದನ್ನೋದಿ ಪೂರ್ಣ ವಿರಾಮ ಕಡೆಗೆ ವಾಲಿತು. ಕಾಮ (comma) ಕಡೆ ಕಣ್ಣು ಬಿತ್ತು. ಸರಿ,

ಕೊಡಲಿ ಪೆಟ್ಟು ಮುಟ್ಟಿಸಿದರು ನಿಮಗೆ ಗೊತ್ತ? ಈ ವಿಷಯ ಕಾಗದದ ಎಡ ಪಕ್ಕದಲ್ಲಿ ಒಂದಿಂಚು ಮಾರ್ಜಿನ್ ಬಿಟ್ಟು ಸುಂದರವಾದ ಬರವಣಿಗೆಯಲ್ಲಿ ಬರೆಯುತ್ತಾ ಹೋದಾಗ ಮಧ್ಯ ಮಧ್ಯ ಕಾಮ ಅಲ್ಪ ವಿರಾಮ ಹಾಕಿ ಮತ್ತೆ ಬರವಣಿಗೆ ಮುಂದುವರಿಸುತ್ತಾ ಉದ್ರುತ ಭಾಗಗಳನ್ನು (questions) ತೋರಿಸುವುದಕ್ಕಾಗಿ ಆದಿಯಲ್ಲಿಯೂ ಅಂತ್ಯದಲ್ಲಿಯೂ (". ") ಮೇಲ್ಭಾಗದಲ್ಲಿ ಹಾಕುವ (inverted commas) ಬಳಸಿ ಬರೆದಾಗ ಒಂದು ಸುಂದರ ರಂಗೋಲಿ ರಚಿಸಿದಂತೆ ಬರವಣಿಗೆಯ ಅಂದ ಚಂದ ಇಮ್ಮಡಿ ಆಗುತ್ತಿತ್ತು. ಛೆ! ಇನ್ನು ಮುಂದೆ ಏನೇನು ಬೇಡವೇ ಬೇಡವೆಂದು ಮೂಲೆಗುಂಪು ಮಾಡುತ್ತಾರೋ ಆ ದೇವರೇ ಬಲ್ಲ!


ಹೊಸ ಹೊಸದು ಬರುತ್ತಲೇ ಇರಬೇಕು. ಬದಲಾವಣೆಯೇ ಜೀವನ. ಹಳೆ ಬೇರು ಹೊಸ ಚಿಗುರು ಎಂಬ ಉಕ್ತಿಯನ್ನು ಅರಿತು ಬಾಳ್ವೆ ನಡೆಸುವುದರಲ್ಲಿದೆ ಜಾಣತನ! ಹಳೆ ಹಾಡಿನ ಸಾಲುಗಳಿಂದ ಪ್ರಾರಂಭವಾಯಿತು ನನ್ನ ಈ ಬರವಣಿಗೆ ಮುಗಿಸುವೆನು ಹಾಡಿನಿಂದಲೇ..."ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ ಹೊಸ ವರ್ಷಕ್ಕೆ ಹೊಸ ಹರುಷಕೆ ಹೊಸತು ತರುತಿದೆ. "ಮಾಮರ ಚಿಗುರಲಿ! ವಸಂತ ತರಲಿ ಮನೋಲ್ಲಾಸ! ಬಣ್ಣ ಬಣ್ಣದ ಪುಷ್ಪಗಳು ಅರಳಿ ಕಂಗೊಳಿಸಲಿ! ಮಲ್ಲಿಗೆಯ ಕಂಪು ಜಗತ್ತಿನಲ್ಲೆಲ್ಲಾ ಪಸರಿಸಲಿ! ಎಲ್ಲರ ಬಾಳು ಸಿಹಿಯಾಗಲಿ!




Quickie 1) There are 5 sisters in a room. Mary is reading a book, Sandy is making Tea, Julie is playing Chess & Carrie is taking a nap. What is the 5th sister doing ?

Quickie 2) If Giraffe has two eyes, Monkey has two eyes & Elephant has two eyes, How many eyes do we have ?

Find the missing numbers a) 7 8 18 57 232 ? . b) 1/1 3/2 7/5 17/12 41/29 ?







**Identify the Equations for example 1) Letters of the Alphabet**

1) 26 = L of the A
2) 7 = D of W
3) 1001= A N
4) 12 = S of the Z
5) 54 = C in a D (with J)
6) 9 = P in the S S
7) 88 = P K
8)13 = S on the A F
9)32 = D at which W F
10)18 = H on a G C
11) 90 = D in a R A
12) 8 = S on a S S
13) 3 = B M (S H T R )
14) 4 = Q in 8 G
15) 24 = H in a D
16) 1 = W on U
17) 5 = D in a Z C
18) 57 = H V
19) 12 = P on a F B T
20) 1000 = W that a P is W
21) 29 = D in F in a L Y
22) 64 = S on a C B
23) 40 = D & N of the G F
24) 76 = T in the B P
25) 50 = W to L Y L
26) 99 = B of B on W
27) 60 = S in a M
28) 1 = H on a U
29) 9 = J on the S C
30) 7 = B for S B
31) 21 = D on a D
32) 7 = W of the A W

**ANSWERS TO THE LAST MONTHS QUIZES**

Quickies 1) The beggar was a woman whose brother died.

Quickies 2) Today is 1st January and Mary's birthday is on 31st December. So she turns 8 yesterday, she will turn 9 this year and 10 next year.

Identify the fruit : 1) Melon 2) Banana 3) Pear 4) Lemon 5) Fig 6) Orange 7) Apple 8) Grapes 9) Cherry 10) Papaya 11) Plump 12) Guava 13) Peach 14) Lychee 15) Kiwi

Position of the 3 police men are B H G

Word Puzzles: 1) Growing Economy 2) In between job 3) Broken record 4) Missing U 5) Forgive & Forget 6) Over Seas travel 7) Your time is up 8) Forensic 9) Summary 10) Round Figure 11) First Lady 12) Square Root

***Compiled by Ananth Banwasi***

# Few More Strides Before the Centenary



✍ **M. A. N. Prasad**

We are bringing from this issue a serial by M.A.N. Prasad about the Association. Prasad has been associated with the management of the Association for more than two decades and has gone through the times when we renovated and rebuilt our building. He will be sharing his intimate knowledge of the Association with the readers through these columns.

- Editor

**Making of the Auditorium**

With the first floor leased out, we had a definite income to the Association and could think of completing the project. A little earlier to this period, there was a fire accident at the Shanmukananda Auditorium and it had got totally gutted. With this in the background, and also the fact that our auditorium will be on the second floor, we wanted to make our auditorium safe by using fire retardant materials or treating them with fire retardant materials. We had to research a lot to first identify fire retardant materials that could be used in an auditorium and their dealers from whom we could procure them.

Our member Sri. Sudarshan from Bangalore one day called us to inform that a friend of his, who is a timber merchant, is disposing off large quantity of teak wood at a discounted price and if we have requirements of teak wood, we should buy it now. We needed teak wood for the stage. We gave him the dimensions of the stage and asked him to coordinate the purchase. It would be ideal if the dealer could convert the wood into tables of 3ft by 3ft and supply. A little later we received a truck full of such tables from Bangalore. The lower surface of these tables were painted with fire retardant paint and arranged to form a stage.

There was no half way in doing the fire protection. Every item used in the auditorium had to be treated; otherwise, the purpose would be defeated. We had a multitude of items like curtains, floor boards, carpets, upholstery of seats, wall panels, etc. We methodically identified the retardant that could be used in each case and procured them.

The Association having members from various technical fields was a great help. Our members from the textile field had some knowledge about fire retardant treatment for curtains. The cloth had to be treated in the mill and this operation is usually processed by running a huge number of metres of cloth, at a time. Thanks to the contacts Dr. Manjunath had with the industry, we could request one of the mills to process the small quantity of about 300 metres required by us. We thus had material for the side wings, mid curtain, back curtain, etc.

We had to plan the risers in the auditorium. There was a frame work of slotted angles. The top of these were covered with 'Bison' board – an asbestos board which

is fire proof. The walls had to be made sound absorbent by lining them with a thick layer of glass wool. This meant making a wooden frame on the wall on which the fibre glass layer is put and a wooden frame is used to retain it. On that wooden frame, a layer of cloth was fixed.

We got an acoustic consultant to design the acoustics of the auditorium. We asked him to get us the drawing of the details of the stage and seating arrangement. We started looking at the chairs in the various auditoriums to identify a chair suitable for our auditorium. We could identify one such variety, but found it to be quite expensive. If we were to get such a chair fabricated, we could save nearly a thousand rupees per chair. We decided to do that.

An engineering firm in Bangalore fabricated the framework of the chairs and shipped it to Mumbai. When these were received at Mumbai, the rest of the chair was completed. Wooden base for the seat and back rest were upholstered and covered with the fire-retardant treated material. The fire-retardant material was woollen tweed with which suits are made. It was treated while manufacturing itself at a factory in Punjab. One of the spare class rooms of the Kannada School at Wadala was used for the upholstering and assembling the chairs.

The main curtain of the stage was again a woollen material. We got a blazer in which sports jackets are made, used for this. The blazer was treated in the mill and supplied to us.

One of the requirements of acoustics was that the walls of the auditorium do not have a plain surface. So, over the cloth covering the glass wool lined walls, strips of wood about 3 inches wide were fixed leaving a gap of 2 to 3 inches between them. Acoustic boards manufactured in White Field near Bangalore were used to treat the walls around the stage. These were also used to line portions of the walls in the auditorium.

After fixing the chairs, carpets were laid out. The physical features of the auditorium was more or less ready. We needed to equip it with theatrical equipment and finish it aesthetically.

---

## ಸಂತಾಪ



ಶನಿವಾರ, ಮಾರ್ಚ್ 25, 2023 ರ ಸಂಜೆ 6.30 ಕ್ಕೆ ಪ್ರೊ. ಶ್ರೀನಿವಾಸರ ಜೊತೆ ಟಿವಿ ನೋಡುತ್ತಿದ್ದ ಅವರ ಪತ್ನಿ ಶ್ರೀಲಕ್ಷ್ಮಿಯವರು ಅಂತೆಯೇ ಸ್ವರ್ಗಾಹರೋಹಣ ಮಾಡಿದರು. ಇಂತಹ ಒಳ್ಳೆಯ ಮನಸ್ಸಿನ, ನಡೆವಳಿಕೆಯ ವ್ಯಕ್ತಿ ಮತ್ತೆಲ್ಲೂ ಸಿಗಲಾರರು. ಅವರ ಕುಟುಂಬದ ಪ್ರಾ. ಶ್ರೀನಿವಾಸ್, ಅಪರ್ಣಾ, ಋತುಪರ್ಣ ಅವರಿಗೆ ಆ ದೇವರು ಸಮಾಧಾನ ತರಲೆಂದು ನಾವು ಕೋರುತ್ತೇವೆ.

# What Can Science Tell Us About Death?

Across time and cultures, people have been conditioned to view death as an endpoint to the experience of life. Religious texts across globe have different interpretations and cites. Is there a Heaven or Hell is not the subject of this discussion. **However, advances in resuscitation science and critical care medicine have challenged assumptions about the finality of death.**

**What is death?**

Death occurs when the heart stops beating. We call this death by cardiopulmonary criteria and it is how death is defined for more than 95 percent of people. A person stops breathing and their brain shuts down, causing all life processes to cease. More recently with the birth of modern intensive care medicine and the ability to artificially keep people's hearts beating, doctors like myself can keep a patient's heart beating longer.

Where people may have suffered irreversible brain damage and brain death, this leads to a situation where the brain has died, but the person's heart is still beating, so legally, they are declared dead based upon irreversible brain death, or death by brain death criteria. This happens in a small fraction of the cases where people are declared dead.

For millennia death was considered an irreversible event and nothing could restore life. During the last decade, we've realized it's only after a person has died that the cells inside their body, including the brain, begin their own death process. We used to think that you had five or 10 minutes before brain cells died, from a lack of oxygen, but we now know that's wrong.

You have hours, if not days, before the brain and other organs in the body are irreversibly damaged after death. It's actually the restoration of oxygen and blood flow back into organs after a person's heart stops, but is then resuscitated that paradoxically leads to accelerated cell death. So, this accelerated secondary injury process is what we need to combat in medicine now.

Why is the term “near -death” experience inaccurate?

The problem with this term is that it is inconsistent with what people actually experience. It is undefined and imprecise. If I said ‘an airplane was involved in a near-miss incident,’ what does that mean? Did you have another plane come in within an inch of another plane, or were they a mile away? The term is ill-defined, and, it doesn't take into consideration the fact that a lot of people have biologically died and returned.

“If they cause pain, they experience the same pain that other person felt, even if they didn't realize it at the time. They actually judge themselves. They suddenly realize why their actions were good or bad, and many claim to see the downstream consequences of their actions”. This is termed as KARMA, our own actions and its consequences. This is a Natural Law.

What is a death experience?

We call it an “experience of death” because that's what it is. People report a unique cognitive experience in relation to death. They may have a perception of seeing their body and the doctors and nurses trying to revive them, yet feel very peaceful while observing. Some report a realization that they may have actually died.

Later they develop a perception or a sensation of being pulled towards a type of destination. During the experience, they review their life from birth, until death, and interestingly this review is based upon their humanity.

They don’t review their lives based on what people strive for, like a career, promotions, or an amazing vacation. Their perspective is focused on their humanity. They notice incidents where they lacked dignity, acted inappropriately towards others, or conversely, acted with humanity and kindness.

They re-experience and relive these moments, but also, what's fascinating, which sort of blows me away because I can't really explain it, is they also describe these experiences from the other person's perspective.

If they caused pain, they experience the same pain that other person felt, even if they didn't realize it at the time. They actually judge themselves. They suddenly realize why their actions were good or bad, and many claim to see the downstream consequences of their actions.

**How do studies of cardiac arrest inform the debate on the nature of consciousness?**

Traditionally, researchers had proposed that mind or consciousness – our self - is produced from organized brain activity. However, nobody has ever been able to show how brain cells, which produce proteins, can generate something so different i.e. thoughts or consciousness. Interestingly, there has never been a plausible biological mechanism proposed to account for this.

Recently some researchers have started to raise the question that maybe your mind, your consciousness, your psyche, the thing that makes you, may not be produced by the brain. The brain might be acting more like an intermediary. It's not a brand-new idea. They have argued that we have no evidence to show how brain cells or connections of brain cells could produce your thoughts, mind or consciousness.

The fact that people seem to have full consciousness, with lucid well-structured thought processes and memory formation from a time when their brains are highly dysfunctional or even non-functional is perplexing and paradoxical.

We do agree that this raises the possibility that the entity we call the mind or consciousness may not be produced by the brain. It’s certainly possible that maybe there's another layer of reality that we haven't yet discovered that's essentially beyond what we know of the brain, and which determines our reality.

So, it is possible for consciousness to be an as of yet undiscovered scientific entity that may not necessarily be produced by synaptic activity in the brain.

# ಅಸೋಸಿಯೇಶನ್‌ನಲ್ಲಿ 04.03.2023ರಂದು ನಡೆದ ಸಂಸ್ಥಾಪನ ದಿನದ ಕೆಲವು ಛಾಯಾಚಿತ್ರಗಳು


















ಛಾಯಾಚಿತ್ರ ಕೃಪೆ : ಶ್ರೀ. ಎಚ್. ಆರ್. ಎಲ್. ವೆಂಕಟೇಶ



# THE MYSORE ASSOCIATION, BOMBAY
# ಮೈಸೂರು ಅಸೋಸಿಯೇಷನ್, ಮುಂಬೈ

## ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ-2022 ವಿಜೇತರು

**ಪ್ರಥಮ**



ಡಾ. ಬೇಲೂರು ರಘುನಂದನ್, ಬೆಂಗಳೂರು
ನಾಟಕ : ಶರ್ಮಿಷ್ಠೆ



**ದ್ವಿತೀಯ**



ಶ್ರೀಮತಿ ವಿನುತಾ ಹಂಚಿನಮನಿ, ಧಾರವಾಡ
ನಾಟಕ : ಪರಿತ್ಯಕ್ತೆ

**ತೃತೀಯ**



ಶ್ರೀಮತಿ ಅಭಿಲಾಷಾ ಎಸ್., ಉಡುಪಿ
ನಾಟಕ : ಭೀಷ್ಮಾವಲೋಕನ



**ತೃತೀಯ**



ಶ್ರೀಮತಿ ರಾಜಶ್ರೀ ಟಿ. ರೈ, ಪೆರ್ಲ
ನಾಟಕ : ಚೇಕತ್ತಿ

**ತೀರ್ಪುಗಾರರು : ಶ್ರೀಮತಿ ಅಹಲ್ಯ ಬಲ್ಲಾಳ್, ಮುಂಬೈ ಹಾಗೂ ಶ್ರೀ. ಶ್ರೀನಿವಾಸ ಪ್ರಭು, ಬೆಂಗಳೂರು**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077